# ಕೇರಳ ಪಾಠಾವಳಿ

# ಕನ್ನಡ

## ಭಾಗ - 2

# KERALA READER

# KANNADA

## PART - 2

**IV**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2016

# ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

# ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by* :

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2015
Reprint : 2016
Typesetting : SCERT
Lay out : SCERT
Cover design : SCERT
Printed at : Centre for Advanced Printing and Training, Thiruvananthapuram-695013
© Department of Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ. ಕನ್ನಡ ನುಡಿಯು ನಮ್ಮೆಲ್ಲರ ಬಾಂಧವ್ಯವನ್ನು ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ.

ಪ್ರೀತಿಪೂರ್ವಕ ಹಾರೈಕೆಗಳೊಂದಿಗೆ,

*ಡಾ.ಜೆ.ಪ್ರಸಾದ್*
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

## TEXTBOOK DEVELOPMENT TEAM

# KANNADA

## STANDARD IV - Part 2

**Participants**

Kamalaksha Nayak K., LPSA, GWLPS, Kajampady.
Mamatha K., LPSA, AUPS, Pallathadka.
Narasimha B., Rtd. HM, GLPS Pathoor
Saraswathi G., HSA, GHSS Paivalike
Shriharsha M.P., P.D. Teacher, GWLPS Kasaragod.
Shyamaprasada K., Asst.Teacher, MAUPS Kallakatta.
Vanishri C.H., LPSA, SSALPS, Marikkana
Vishwanatha Rai, Rtd. HM, GSBS Kumbla.

**Experts**

Dr. Srikrishna Bhat P., Professor (Rtd), Govt. College, Kasaragod.
Dr. Rathnakara Mallamoole, Govt. College Kasaragod
Shridhara N., Asst. Professor, Govt. College, Kasaragod
Shivashankar, Asst. Professor, Govt.College, Manjeshwar.

**Artists**

Ravi Pilicode
Shyam Sasi

**Academic Co-ordinator**

Faisal Mavulladathil, Research Officer SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


**5. ವ್ಯಕ್ತಿತ್ವ ವಿಕಾಸ** **91**

1. ಕಬಡಿ (ಪದ್ಯ)
2. ಅಗೊಳಿ ಮಂಜಣ (ಕಥೆ)
3. ಶಿಸ್ತಿನ ಸಿಪಾಯಿಗಳು (ಲೇಖನ)
4. ತಿಲಕಾಷ್ಠಮಹಿಷಬಂಧನ (ನಾಟಕ)

**6. ನಾವು ಸಮಾನ** **115**

1. ಎಲ್ಲಾ ಭೇದ ಮರೆತು (ಪದ್ಯ)
2. ವೀರ ವೇಲುತಂಬಿ (ಕಥೆ)
3. ಖಾನ್ ಅಬ್ದುಲ್ ಗಫಾರ್‌ಖಾನ್ (ಲೇಖನ)

**7. ಹೋಗೋಣ ಬಾರಾ** **129**

1. ನಾವಿಕ ಸಿಂದಬಾದ್ (ಕಥೆ)
2. ಬಾನಿನಗಲ ಪಟಪಟ (ಲೇಖನ)
3. ಜೋಗದ ಸಿರಿ (ಪದ್ಯ)

**8. ಜ್ಞಾನ – ವಿಜ್ಞಾನ** **147**

1. ಮೂಢಭಕ್ತಿ (ಕಥೆ)
2. ಮಂಗಳ ಗ್ರಹದಲ್ಲಿ ಪುಟ್ಟಿ (ಪದ್ಯ)
3. ವಾಲ್ಟ್ ಡಿಸ್ನಿ (ಲೇಖನ)





# 5. ವ್ಯಕ್ತಿತ್ವ ವಿಕಾಸ



ಆರೋಗ್ಯವೆಂದರೆ ಸ್ವಸ್ಥ ಮನಸ್ಸು ಮತ್ತು ಸ್ವಸ್ಥ ಶರೀರ. ಆರೋಗ್ಯವಿದ್ದರೆ ಮಾತ್ರ ನಮಗೆ ಏನನ್ನಾದರೂ ಸಾಧಿಸಬಹುದು. ಶರೀರದ ಆರೋಗ್ಯಕ್ಕೆ ಕ್ರೀಡೆ, ವ್ಯಾಯಾಮ, ಯೋಗಾಸನಗಳು ನೆರವಾಗುತ್ತವೆ. ಮನಸ್ಸಿನ ಆರೋಗ್ಯಕ್ಕೆ ಯೋಗ, ಉತ್ತಮ ಹವ್ಯಾಸಗಳು, ಸಾಹಿತ್ಯ ಕೃತಿಗಳ ಓದು ಸಹಾಯ ಮಾಡುತ್ತವೆ. ಮನಸ್ಸು ಮತ್ತು ಶರೀರ ಚೆನ್ನಾಗಿದ್ದರೆ ವ್ಯಕ್ತಿತ್ವದ ವಿಕಾಸವಾಗುತ್ತದೆ. ಸುಖ ಸಮೃದ್ಧಿಗಳು ಲಭಿಸುತ್ತವೆ.





# ಕಬಡಿ

ಶಾಲೆಗಂಟೆ ಬಡಿಯಲಂದು
ಗೋಪಿ ನಾಣಿ ಹೊರಗೆ ಬಂದು
ಗೆಳೆಯರನ್ನು ಕೂಗಿ ಕರೆದು ಇಂತು ನುಡಿದರು.
ಆಡಬನ್ನಿ ಗೆಳೆಯರೆಲ್ಲ
ಕೂಡಿಬನ್ನಿ ಬಳಗವೆಲ್ಲ
ಕೋಟೆ ಬರೆದು ತಂಡ ಕಟ್ಟಿ ಕಬಡಿಯಾಡುವ
ನಾಣಿ ಗೋಪಿ ಮುಂದೆ ಬಂದು
ತಮ್ಮ ಗೆಳೆಯರನ್ನು ಕರೆಯೆ
ಎರಡು ಕಡೆಯಲೆರಡು ತಂಡ ಸಿದ್ಧಗೊಂಡಿತು.
ಕಬಡಿ ಕಬಡಿ ಕಬಡಿ ಎಂದು
ನಾಣಿ ಹಾರಿ ಮುಂದೆ ಬಂದು
ಗೋಪಿ ತಂಡದೆಡೆಗೆ ಬೇಗ ದಾಳಿಯಿಟ್ಟನು.
ನಾಣಿ ಗೂಳಿಯಂತೆ ನುಗ್ಗಿ
ಗೋಪಿ ತಂಡದವನ ಬಗ್ಗಿ
ಮುಟ್ಟಿ ತನ್ನ ತಂಡದೆಡೆಗೆ ಓಡಿ ಬಿಟ್ಟನು
ಸುತ್ತ ನೆರೆದ ಗೆಳೆಯರೆಲ್ಲ
ಕೇಕೆ ಹಾಕಿ ನಗುವರಲ್ಲ
ಪುಳಕಗೊಂಡ ಗೋಪಿ ತಾನು ನುಗ್ಗಿಬಿಟ್ಟನು.
ನಾಣಿ ಗೋಪಿಯನ್ನು ಹಿಡಿದು
ಹಾರಿ ಹೋಗದಂತೆ ತಡೆದು
ತನ್ನ ತಂಡಕಾಗ ಜಯವ ತಂದುಕೊಟ್ಟನು
ಸೋತು ಹೋಯಿತಲ್ಲ ತಂಡ
ಹೋಗಿರೆಲ್ಲ ನೀವು ದಂಡ
ಎಂದು ಗೋಪಿ ಗೆಳೆಯರನ್ನು ಜರೆದುಬಿಟ್ಟನು
ನಾಣಿ ಗೋಪಿಯನ್ನು ಕರೆದು
ಗೆಳೆಯರನ್ನು ಅಪ್ಪಿ ಹಿಡಿದು
ಅವರ ಆಟವನ್ನು ಮೆಚ್ಚಿ ಹಿಗ್ಗಿ ನುಡಿದನು
ಇಂದು ನಮಗೆ ನಾಳೆ ನಿಮಗೆ
ಗೆಲುವು ಇಹುದು ಸತತ ನಮಗೆ
ಎಂದು ಗೆಳೆಯರನ್ನು ಹೊಗಳಿ ಮನೆಗೆ ನಡೆದನು



*ಲಕ್ಷ್ಮೀಸುತ, ಎಡನೀರು*

## ಚಟುವಟಿಕೆಗಳು

### ಹಾಡುವ

- ಕಬಡಿ ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

  1. ಗೆಳೆಯರು ಯಾವ ಆಟವನ್ನು ಆಡಿದರು?
  2. ಗೋಪಿಯು ಗೆಳೆಯರನ್ನು ಜರೆದದ್ದು ಯಾಕೆ?
  3. ನಾಣಿಯು ಗೋಪಿಯನ್ನು ಯಾವ ರೀತಿ ಸಮಾಧಾನಪಡಿಸಿದನು?

### ಪ್ರಾಸಪದ ಬರೆಯುವ

- 'ಕಬಡಿ' ಪದ್ಯದಲ್ಲಿ ಬರುವ ಪ್ರಾಸಪದಗಳನ್ನು ಪಟ್ಟಿಮಾಡಿರಿ.

### ಇಷ್ಟವಾದ ಸಾಲು ಬರೆಯುವ

- ಈ ಪದ್ಯದಲ್ಲಿ ನಿಮಗೆ ಇಷ್ಟವಾದ ಸಾಲು ಯಾವುದು? ಆ ಸಾಲು ಇಷ್ಟವಾಗಲು ಕಾರಣವೇನು? ಬರೆಯಿರಿ.

### ಸಾಲುಗಳನ್ನು ಆರಿಸಿ ಬರೆಯುವ

- ಸಮಾನ ಆಶಯವಿರುವ ಸಾಲುಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.

  - ಕಬಡಿ, ಕಬಡಿ ಎನ್ನುತ್ತಾ ನಾಣಿಯು ಹಾರಿ ಮುಂದೆ ಬಂದನು.
  - ಗೆಳೆಯರೇ ಎಲ್ಲರೂ ಜೊತೆಯಾಗಿ ಸೇರಿ ಆಡುವ
  - ಸುತ್ತಲೂ ಸೇರಿದ ಸ್ನೇಹಿತರೆಲ್ಲರೂ ಜೋರಾಗಿ ನಗುತ್ತಿರುವರು.
  - ಇಂದು ನಮ್ಮ ತಂಡ ಗೆದ್ದರೆ ನಾಳೆ ನಿಮ್ಮ ತಂಡ ಗೆಲ್ಲಬಹುದು.

## ಹೆಸರು ಬರೆಯುವ

- ಪಟ್ಟಿಯಲ್ಲಿರುವ ಅಕ್ಷರಗಳನ್ನುಪಯೋಗಿಸಿ ಆಟಗಳ ಹೆಸರುಗಳನ್ನು ಬರೆಯಿರಿ. ಅವುಗಳಿಂದ ಗ್ರಾಮೀಣ ಆಟಗಳನ್ನು ಆರಿಸಿ ಬರೆಯಿರಿ.

| | | | | | | |
|---|---|---|---|---|---|---|
| ದೊ | ಚೆ | ಟ್ಟಿ | ಕ | ಟ | ಕ್ರೋ | ಟ್ |
| ಸೊ | ಕು | ಕೊ | ಪ್ಪಾ | ಡೊಂ | ಕಾ | ಡಿ |
| ಕೆ | ಫೂ | ಕ್ರಿ | ಣ್ಣು | ಬ | ಬಾ | ಲಿ |
| ಕು | ನ್ನೆ | ಲ್ | ಮ | ಣೆ | ಲೆ | ಚ್ಚಾ |
| ವಾ | ಮು | ಲಿ | ದ | ಹು | ನ | ಣ್ಣೆ |

1. ಕಬಡಿ
2. ......................
3. ......................
4. ......................
5. ......................
6. ......................
7. ......................
8. ......................
9. ......................
10. ......................

## ಓದಿ ತಿಳಿಯುವ

ಕೆಳಗೆ ನೀಡಿರುವ ಗ್ರಾಮೀಣ ಆಟದ ವಿವರಣೆಯನ್ನು ಓದಿರಿ.

### ಡೊಂಕಾಟ

ಮಕ್ಕಳು ಎರಡು ಗುಂಪಾಗಬೇಕು. ಬಯಲಿನಲ್ಲಿ ಒಂದು ವೃತ್ತ ಮಾಡಬೇಕು. ಒಂದು ಗುಂಪಿನವರು ವೃತ್ತದ ಒಳಗೆ. ಇನ್ನೊಂದು ಗುಂಪಿನ ಒಬ್ಬ ಒಂಟಿಕಾಲಿನಲ್ಲಿ ಹಾರುತ್ತಾ ವೃತ್ತದೊಳಗಿರುವವರನ್ನು ಹಿಡಿಯಬೇಕು. ವೃತ್ತದೊಳಗಿರುವವರು ಅವನಿಗೆ ಸಿಗದಂತೆ ಓಡಬೇಕು. ಆದರೆ ವೃತ್ತದ ಹೊರಗೆ ಹೋಗಬಾರದು. ಹಿಡಿಯಲು ಬರುವವನಿಗೆ ಆಯಾಸವಾದರೆ ಅವರ ಗುಂಪಿನ ಇನ್ನೊಬ್ಬ ಒಂಟಿಕಾಲಿನಲ್ಲಿ ಹಾರುತ್ತಾ ಬಂದು ಆಟವನ್ನು ಮುಂದುವರಿಸುತ್ತಾನೆ. ವೃತ್ತದೊಳಗಿರುವವ ಎಲ್ಲರನ್ನೂ ಹಿಡಿದರೆ ಆಟ ಮುಗಿಯುತ್ತದೆ. ಬಳಿಕ ಒಳಗಿದ್ದವರು ಹೊರಗೆ. ಹೊರಗಿದ್ದವರು ಒಳಗೆ. ಹೀಗೆ ಆಟ ಮುಂದುವರಿಯುವುದು. ಕಡಿಮೆ ಸಮಯದಲ್ಲಿ ಹೆಚ್ಚು ಜನರನ್ನು ಹಿಡಿಯುವ ತಂಡ ಗೆಲ್ಲುವುದು.

### ವಿವರಣೆ ಬರೆಯುವ

- ಡೊಂಕಾಟದ ವಿವರಣೆಯನ್ನು ಓದಿದಿರಲ್ಲವೇ? ಇದೇ ರೀತಿ ನಿಮಗೆ ತಿಳಿದಿರುವ ಒಂದು ಗ್ರಾಮೀಣ ಆಟದ ಬಗ್ಗೆ ವಿವರಣೆ ಬರೆಯಿರಿ.

### ಅಡಿಟಿಪ್ಪಣಿ ಬರೆಯುವ

- ಕೆಳಗೆ ನೀಡಿರುವ ಚಿತ್ರವನ್ನು ಗಮನಿಸಿ ಸೂಕ್ತವಾದ ಅಡಿ ಟಿಪ್ಪಣಿಯನ್ನು ಬರೆಯಿರಿ.



### ವೀಕ್ಷಕ ವಿವರಣೆ ಹೇಳುವ


- ಕಬಡಿ ಆಟ ಆಡುವುದನ್ನು ನೋಡಿರಿ. ಅದರ ವೀಕ್ಷಕ ವಿವರಣೆ ನೀಡಿರಿ.

# ಅಗೊಳಿ ಮಂಜಣ

ನಮ್ಮ ನಾಡಿನಲ್ಲಿ ಹೆಚ್ಚು ತಿನ್ನುವವರನ್ನು ಕಂಡಾಗ ಜನ ವಿನೋದಕ್ಕಾಗಿ 'ಅಗೊಳಿ ಮಂಜಣ' ಎಂದು ಹೇಳುವುದು ವಾಡಿಕೆಯಾಗಿದೆ. ಈ ಹೇಳಿಕೆ ಹೇಗೆ ಬಂತು ಗೊತ್ತೇ? ಅದರ ಹಿಂದಿನ ಕಥೆ ಹೀಗಿದೆ.

ಮಂಗಳೂರಿನಿಂದ ಸುಮಾರು ಹದಿಮೂರು ಮೈಲು ದೂರದಲ್ಲಿ ಚೇಳಾರು ಎಂಬ ಹೆಸರಿನ ಗ್ರಾಮವಿದೆ. ಹಲವು ವರ್ಷಗಳ ಹಿಂದೆ ಆ ಹಳ್ಳಿಯಲ್ಲಿ ಮಂಜಣನೆಂಬ ಯುವಕನಿದ್ದನು. ಅವನಿಗೆ ಓದು ಬರಹ ಸಾಕಷ್ಟಿರಲಿಲ್ಲ. ಅವನಿಗೆ ಕಲಿಯುವ ಆಸೆಯಿದ್ದರೂ ಆ ಗ್ರಾಮದಲ್ಲಿ ಅಂದು ಶಾಲೆಗಳು ಇರಲಿಲ್ಲ. ದೂರ ಹೋಗಿ ಕಲಿಯಲೂ ಎಡೆಯಾಗಲಿಲ್ಲ. ಆ ಕಾರಣದಿಂದ ಆತನು ಬಾಲ್ಯದಿಂದಲೇ ಮನೆಯಲ್ಲಿ ಉಳಿದು ಹೆತ್ತವರ ಅಕ್ಕರೆಯ ಮಗನಾಗಿ ಬೆಳೆದನು. ವಿದ್ಯೆ ಇಲ್ಲದಿದ್ದರೂ ಮಂಜಣನು ಕಂಬಳದ ಕೋಣ ಓಡಿಸುವುದರಲ್ಲಿ ಬಹಳ ಗಟ್ಟಿಗನು. ಹಾಯುವ ಎಂಥಾ ಕೋಣವನ್ನಾದರೂ ಹಿಡಿದು ಅವನು ನಿಲ್ಲಿಸುತ್ತಿದ್ದನು. ಹೊರೆ ಹೊರುವುದರಲ್ಲೂ ಅವನು ಬಹಳ ಗಟ್ಟಿಗನು. ಎಷ್ಟು ದೊಡ್ಡ ನೀರಿನ ಮರಿಗೆಯನ್ನಾದರೂ ಹೊರುತ್ತಿದ್ದನು. ಬಾಲಕನಾಗಿದ್ದಾಗಲೇ ಜವ್ವನಿಗರಿಂದ ಎತ್ತಲಾಗದ ಎಣ್ಣೆಯ ಕೊಪ್ಪರಿಗೆಯನ್ನು ಲೀಲಾಜಾಲವಾಗಿ ಎತ್ತುತ್ತಿದ್ದನು. ದಾರಿ ನಡೆಯುವುದರಲ್ಲಿ, ನೀರು ಮೊಗೆಯುವುದರಲ್ಲಿ ಇವನ ಸಮಾನರು ಯಾರೂ ಇರಲಿಲ್ಲ.

ಮಂಜಣನು ಒಂದು ಸರ್ತಿಗೆ ಎಂಟು ಮಂದಿ ಊಟ ಮಾಡುವಷ್ಟು ಅನ್ನವನ್ನು ಉಣ್ಣುತ್ತಿದ್ದನು. ಕೂತವನು ಏಳುವುದರೊಳಗೆ ಮೂರು ಹಲಸಿನ ಹಣ್ಣುಗಳನ್ನು ಒಬ್ಬನೇ ತಿಂದುಬಿಡುತ್ತಿದ್ದನು. ನೂರಾರು ಬಾಳೆ ಹಣ್ಣುಗಳನ್ನು ನುಂಗಿ ಬಿಡುತ್ತಿದ್ದನು. ಅವನಿಗೆ ಒಪ್ಪೊತ್ತು ಊಟಕ್ಕೆ ಒಂದು ಅಗೊಳಿ ಅನ್ನಬೇಕು.



‘ಅಗೊಳಿ’ ಎಂದರೆ ತುಳು ಮಾತಿನಲ್ಲಿ ‘ದೊಡ್ಡಚೆರಿಗೆ’ ಎಂದು ಅರ್ಥ. ಅಗೊಳಿ ಅನ್ನವನ್ನು ಒಮ್ಮೆಗೇ ಉಣ್ಣುತ್ತಿದ್ದ ಅವನನ್ನು ‘ಅಗೊಳಿ ಮಂಜಣ’ ಎಂದು ಕರೆಯುತ್ತಿದ್ದರು. ಮಂಜಣನು ಕೇವಲ ತಿಂಡಿಬಾಕನೆಂದು ಮಾತ್ರ ತಿಳಿಯದಿರಿ. ಅವನು ಸಾಹಸಿಯೂ ಹೌದು.

ಒಂದು ದಿನ ಮಂಜಣನು ಬಿಸಿಲು ಅಡ್ಡವಾದ ಮೇಲೆ ಮನೆಯಿಂದ ಹೊರಟು ಪಡಂಬೂರಿಗೆ ಹೋದನು. ಪಡಂಬೂರು ಪೇಟೆಯಲ್ಲಿ ಒಂದು ಅಂಗಡಿಯ ಎದುರು ಕೆಲವು ಯುವಕರು ಕೂಡಿದ್ದರು. ಅಂಗಡಿಯಲ್ಲಿ ಒಂದು ಹಲಗೆಯ ಮೇಲೆ ಕಬ್ಬಿನ ತುಂಡುಗಳ ಕಟ್ಟುಗಳು ಸಾಲಾಗಿ ಇದ್ದುವು. ಆ ಯುವಕರು ಪಂಥಕಟ್ಟಿ ಆಟವಾಡುತ್ತಿದ್ದರು. ಒಬ್ಬನು ಒಂದು ಕಟ್ಟನ್ನು ಅಂಗಡಿಯವನಿಂದ ಕ್ರಯಕ್ಕೆ ತೆಗೆದುಕೊಂಡು ತನ್ನ ಜತೆಯವನೊಡನೆ, “ಇಕೋ, ಈ ಕಟ್ಟಿನಲ್ಲಿ ಹತ್ತು ತುಂಡುಗಳಿವೆ. ಈ ಕಟ್ಟನ್ನು ನೀನು ಒಂದೇ ಏಟಿಗೆ ಹೊಡೆದು ತುಂಡು ಮಾಡಿದರೆ ಕಬ್ಬು ನಿನಗೆ. ಕಬ್ಬಿನ ಕ್ರಯವನ್ನು ಅಂಗಡಿಯವನಿಗೆ ನಾನು ಕೊಡುತ್ತೇನೆ. ತುಂಡು ಮಾಡಲಿಕ್ಕೆ ತಪ್ಪಿದರೆ ಕಬ್ಬು ನನಗೆ. ಅಂಗಡಿಯವನ ಹಣ ನೀನು ಕೊಡಬೇಕು” ಎಂದನು. ಜತೆಯವನು ಪಂಥಕ್ಕೆ ಒಪ್ಪಿಕೊಂಡು ಕಬ್ಬಿನ ಕಟ್ಟನ್ನು ಬಲಗೈಯಿಂದ ಹಿಡಿದು ಮೇಲಕ್ಕೆ ಎತ್ತಿ ತನ್ನ ಎಡಗೈಯ ಮಣಿಗಂಟಿನ ಮೇಲೆ ಹೊಡೆದುಬಿಟ್ಟನು. ಕಬ್ಬಿನ ಕಟ್ಟಿನಲ್ಲಿದ್ದ ತುಂಡುಗಳಲ್ಲಿ ಒಂದು ಮಾತ್ರ ಚೂರಾಯಿತು. ಪಂಥದಲ್ಲಿ ಅವನು ಸೋತನು.


ಅಷ್ಟರಲ್ಲಿ ಮಂಜಣನು ಅಲ್ಲಿಗೆ ಬಂದನು. ಎಲ್ಲರೂ ಕೇಳುವಂತೆ “ನಾನು ಪಂಥ ಕಟ್ಟುತ್ತೇನೆ” ಎಂದನು.

ಮಂಜಣನು ಈ ಮೊದಲು ಹಲವು ಸಲ ಹೀಗೆಯೇ ಪಂಥಕಟ್ಟಿ ಅವರನ್ನು ಗೆದ್ದಿದ್ದನು. ಇವನನ್ನು ಒಂದು ಸರ್ತಿಯಾದರೂ ಸೋಲಿಸಬೇಕೆಂದು ಅವರೆಲ್ಲರೂ ಹೊತ್ತು ಕಾಯುತ್ತಿದ್ದರು. ಅವರಲ್ಲಿ ಒಬ್ಬನು “ಮಂಜಣ್ಣಾ! ಈ ಹೊತ್ತಿನ ಕಬ್ಬು ಚೇಳಾರಿನ ಕಬ್ಬಲ್ಲ. ಇದು ಪಡಂಬೂರಿನ ಕಬ್ಬು; ಕಬ್ಬು ನೋಡಿ ಪಂಥಕಟ್ಟು” ಎಂದನು. ಅದಕ್ಕೆ ಮಂಜಣನು ನಗುತ್ತಾ “ಕಟ್ಟು ಮುರಿಯುವುದಕ್ಕೆ ಕಣ್ಣು ಬೇಡ. ಕೈ ಇದ್ದರೆ ಸಾಕಷ್ಟೆ” ಎಂದು ಉತ್ತರ ಕೊಟ್ಟನು.

ಗುಂಪಿನವನು “ಹಾಗಾದರೆ ನಾವು ತೋರಿಸಿದ ಕಟ್ಟನ್ನೇ ಮುರಿಯಬೇಕು. ಹಾಗೆ ಮುರಿದರೆ ಇಲ್ಲಿರುವ ಕಟ್ಟುಗಳೆಲ್ಲಾ ನಿನಗೆ, ಮುರಿಯದಿದ್ದರೆ ಈ ಅಂಗಡಿಯಲ್ಲಿದ್ದ ಕಬ್ಬು ಎಲ್ಲಾ ನಮಗೆ. ಪಂಥಕ್ಕೆ ಒಪ್ಪುತ್ತೀಯೋ” ಎಂದು ಹೇಳಿದನು.

ಮಂಜಣನು “ನಾನು ಕಬ್ಬನ್ನು ಮುರಿಯುವವನು. ಆಡಿದ ಮಾತನ್ನು ಮುರಿಯುವವನಲ್ಲ” ಎಂದು ಹೇಳಿ “ನಿಮಗೆ ಒಪ್ಪಿಗೆಯೋ” ಎಂದು ಕೇಳಿದನು. ಪಡಂಬೂರಿನ ಯುವಕರು “ಒಪ್ಪಿಗೆ” ಎಂದರು.

ಮಂಜಣನು, “ಉಟ್ಟ ಪಂಚೆಯನ್ನು ಸರಿಮಾಡಿಕೊಂಡು ಬರುವೆನು” ಎಂದು ಹೇಳಿ ಅಂಗಡಿಯ ಹಿಂದುಗಡೆ ಹೋದನು. ಆ ವೇಳೆಗೆ ಗುಂಪಿನಲ್ಲಿದ್ದವನೊಬ್ಬನು ಮೊಳವುದ್ದದ ಚಿಕ್ಕದೊಂದು ಕಬ್ಬಿಣದ ಸರಳನ್ನು ಹೊರಗೆ ಕಾಣದಂತೆ ಆ ಕಬ್ಬಿನ ಕಟ್ಟಿನಲ್ಲಿ ಅಡಗಿಸಿ ಕಟ್ಟಿದನು.



ಮಂಜಣನು ಪಂಥಕ್ಕೆ ಅಣಿಮಾಡಿಕೊಂಡು ಅಂಗಡಿಯ ಮುಂದೆ ಬಂದು ನಿಂತನು. "ಯಾವ ಕಟ್ಟು ಮುರಿಯಬೇಕು? ತೋರಿಸಿ ಬಿಡಿ" ಎಂದು ಹೇಳಿ ತನ್ನ ಎರಡೂ ಮೊಳಕೈಗಳನ್ನು ತೋರಿಸಿದನು.

"ಮಂಜಣ್ಣ! ಆ ಕಟ್ಟು! ಹಲಗೆಯ ತುದಿಯಲ್ಲಿದ್ದ ಕಟ್ಟು! ಆ ಕಟ್ಟನ್ನು ಒಂದೇ ಏಟಿಗೆ ತುಂಡು ಮಾಡಿಬಿಡಬೇಕು" ಎಂದು ಹಿಂದುಗಡೆಯಿಂದ ಯಾರೋ ಹೇಳಿದರು.

ಮಂಜಣನು, "ಇದಲ್ಲವೇ ನನಗೆ ತೋರಿಸಿದ ಕಟ್ಟು" ಎಂದು ಹೇಳಿ ಅದನ್ನು ಗುಂಪಿನ ನಡುವೆ ಎಲ್ಲರ ಎದುರು ಎತ್ತಿ ಹಿಡಿದನು. ಮತ್ತೆ ತನ್ನ ಎಡಗೈಯ ಮಣಿಗಂಟನ್ನು ತನ್ನ ಎದೆಯ ಸಮತಲಕ್ಕೆ ತಂದು ಬಲಗೈಯ ಐದೂ ಬೆರಳುಗಳಿಂದ ಕಬ್ಬಿನ ಕಟ್ಟನ್ನು ಒಂದು ತುದಿಯಲ್ಲಿ ಬಿಮ್ಮನೆ ಹಿಡಿದನು. ಎಲ್ಲರ ದೃಷ್ಟಿ ಮಂಜಣನ ಕೈಯ ಮೇಲೆ ಬಿದ್ದಿತು. ಮಂಜಣನು ಬಲಗೈ ಸುಯ್ಯನೆ ಬೀಸಿದಂತಾಯಿತು. ಮೇಲಕ್ಕೆ ಎತ್ತಿದ ಕಬ್ಬಿನ ಕಟ್ಟು ರುಮ್ಮನೆ ಮೇಲಕ್ಕೆ ಹೋಗಿ ಎಡಗೈಯ ಮಣಿಗಂಟಿನ ಮೇಲೆ ರುಮ್ಮನೆ ಬಂದು ಬಿತ್ತು. ಕಟ್ಟಿನ ಸುತ್ತಲಿದ್ದ ಕಬ್ಬಿನ ತುಂಡುಗಳು ಚೂರುಚೂರಾಗಿ ಗುಂಪಿನವರ ತಲೆಯ ಮೇಲೆ ಸಿಡಿದುಹೋದುವು. ಮಂಜಣನ ಬಲಗೈಯಲ್ಲಿ ಕಟ್ಟಿನ ಅರ್ಧಭಾಗ ಮಾತ್ರ ಉಳಿಯಿತು. ಅದನ್ನು ಅವನು ಹಾಗೆಯೇ ಎತ್ತಿ ತೋರಿಸಿದನು. ಅಷ್ಟರಲ್ಲಿ ಗುಂಪಿನಲ್ಲಿದ್ದವನೊಬ್ಬನು ಮುಂದೆ ಬಂದು "ಆ ತುಂಡು ಚೂರಾಗಲಿಲ್ಲ" ಎಂದು ಹೇಳಿ ಮಂಜಣನ ಕೈಯಲ್ಲಿದ್ದ ಅರ್ಧ ಕಟ್ಟನ್ನು ನೋಡಿದನು. ಆದರೆ ಕಬ್ಬಿಣದ ಸರಳು ಕೂಡಾ ತುಂಡಾಗಿ ಒಂದು ತುಂಡು ಅಂಗಡಿಯ ಹಲಗೆಯ ಮೇಲೆ ಬಿದ್ದಿತು. ಮತ್ತೊಂದು ಮಂಜಣನ ಬಲ ಕೈಯಲ್ಲಿ ಇದ್ದಿತು. ಮಂಜಣನು ಪಂಥವನ್ನು ಗೆದ್ದನು. ಪಂಥದಲ್ಲಿ ಮಂಜಣನಿಗೆ ತಾವು ಮಾಡಿದ ಮೋಸಕ್ಕಾಗಿ ಅಲ್ಲಿದ್ದವರೆಲ್ಲರೂ ನೊಂದುಕೊಂಡರು. ಅವನೊಡನೆ ತಮ್ಮ ತಪ್ಪನ್ನು ಒಪ್ಪಿಕೊಂಡರು. ಮಂಜಣನು ಮನೆಗೆ ಹಿಂತಿರುಗಿದನು.

## ಚಟುವಟಿಕೆಗಳು

### ಪ್ರಶ್ನೆ ತಯಾರಿಸುವ

- 'ಅಗೊಳಿ ಮಂಜಣ' ಪಾಠವನ್ನು ಓದಿ ಕಥೆಯಲ್ಲಿನ ಮುಖ್ಯ ಘಟನೆಗಳೆಲ್ಲ ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಿರಿ.

### ಶೀರ್ಷಿಕೆ ಬರೆಯುವ

- ಈ ಪಾಠಭಾಗಕ್ಕೆ ಸಂಬಂಧಿಸಿದ ಸೂಕ್ತವಾದ ಇನ್ನೊಂದು ಶೀರ್ಷಿಕೆಯನ್ನು ಬರೆಯಿರಿ. ಆ ಶೀರ್ಷಿಕೆಯನ್ನು ಬರೆಯಲು ಇರುವ ಕಾರಣಗಳನ್ನು ತಿಳಿಸಿರಿ.

### ಸರಿ ತಪ್ಪು ಬರೆಯುವ

- ಈ ಕೆಳಗಿನ ಹೇಳಿಕೆಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ. ತಪ್ಪಾದ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.
  - ಮಂಜಣನಿಗೆ ಓದು ಬರಹ ಸಾಕಷ್ಟಿರಲಿಲ್ಲ.
  - ಮಂಜಣನಿಗೆ ಒಪ್ಪೊತ್ತು ಊಟಕ್ಕೆ ಒಂದು ಬಟ್ಟಲು ಅನ್ನ ಬೇಕಾಗುತ್ತಿತ್ತು.
  - ಮಂಜಣನು ಹಲವು ಸಲ ಪಂಥ ಕಟ್ಟಿ ಸೋತಿದ್ದನು.
  - ಹೆಚ್ಚು ತಿನ್ನುವವರನ್ನು ಕಂಡಾಗ ಜನರು ವಿನೋದಕ್ಕಾಗಿ 'ಅಗೊಳಿ ಮಂಜಣ' ಎಂದು ಕರೆಯುತ್ತಾರೆ.
  - ಮಂಜಣನು "ನಾನು ಆಡಿದ ಮಾತನ್ನು ಮುರಿಯುವವನು, ಕಬ್ಬನ್ನು ಮುರಿಯುವವನಲ್ಲ" ಎಂದನು.

### ಸಮಾನಾರ್ಥ ಪದ ಬರೆಯುವ

- ವಾಕ್ಯದಲ್ಲಿ ಅಡಿಗೆರೆ ಎಳೆದ ಪದಗಳ ಸಮಾನಾರ್ಥ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆಯಿರಿ. ಆ ಪದಗಳನ್ನುಪಯೋಗಿಸಿ ಹೊಸ ವಾಕ್ಯಗಳನ್ನು ರಚಿಸಿರಿ.
  - ತಾಯಿಗೆ ತನ್ನ ಮಗುವನ್ನು ಕಂಡರೆ ಬಹಳ <u>ಪ್ರೀತಿ</u>.
  - ನದಿಯಲ್ಲಿ <u>ಜಲವು</u> ಜುಳು ಜುಳು ಎಂದು ಹರಿಯುತ್ತಿತ್ತು.
  - <u>ಪಟ್ಟಣದಲ್ಲಿ</u> ಹಲವಾರು ಅಂಗಡಿಗಳಿವೆ.
  - ಜಾತ್ರೆಯಲ್ಲಿ ಜನರ <u>ಸಮೂಹವೆ</u> ನೆರೆದಿತ್ತು.
  - <u>ಸಮಯಕ್ಕೆ</u> ಸರಿಯಾಗಿ ಆಹಾರವನ್ನು ಸೇವಿಸಬೇಕು.
  - ನಾವು ಯಾವಾಗಲೂ ಇತರರಿಗೆ <u>ವಂಚನೆ</u> ಮಾಡಬಾರದು.

# ಶಿಸ್ತಿನ ಸಿಪಾಯಿಗಳು

ಅಂದು ವಾರ್ಷಿಕೋತ್ಸವ. ಮಕ್ಕಳೆಲ್ಲ ಸಂಭ್ರಮದಿಂದ ಓಡಾಡುತ್ತಿದ್ದರು. ಕೆಲವರು ಹಾಡಿನ ಅಭ್ಯಾಸ ನಡೆಸುತ್ತಿದ್ದರು. ಇನ್ನು ಕೆಲವರು ನಾಟಕದ ಅಭ್ಯಾಸ ಮಾಡುತ್ತಿದ್ದರು. ಮತ್ತಿಬ್ಬರು ನೃತ್ಯ ಮಾಡುತ್ತಿದ್ದರು. ಆಗ ಒಂದು ಗುಂಪು ಮಕ್ಕಳು ಶಿಸ್ತಿನಿಂದ ಗೇಟಿನ ಬಳಿಗೆ ಬಂದರು. ಅವರೆಲ್ಲ ಸಮವಸ್ತ್ರ ಧರಿಸಿದ್ದರು. ಅವರು ಎರಡು ಸಾಲುಗಳಾಗಿ ನಿಂತರು. ಅಷ್ಟರಲ್ಲಿ ಒಂದು ಕಾರು ಅಲ್ಲಿಗೆ ಬಂತು. ಅದರಿಂದ ವಿದ್ಯಾಧಿಕಾರಿಗಳು ಇಳಿದರು. ಮಕ್ಕಳೆಲ್ಲ ಶಿಸ್ತಿನಿಂದ ವಂದಿಸಿದರು. ಅವರ ವಂದನೆಯನ್ನು ಸ್ವೀಕರಿಸಿದ ಅಧಿಕಾರಿಗಳು ಒಳಗೆ ಬಂದರು.

ಸಮವಸ್ತ್ರ ಧರಿಸಿದ ಮಕ್ಕಳು ಅಲ್ಲಿಂದ ಚದುರಿದರು. ಅವರಲ್ಲಿ ಕೆಲವರು ಅತಿಥಿಗಳನ್ನು ನಿಶ್ಚಿತ ಜಾಗದಲ್ಲಿ ಕುಳ್ಳಿರಿಸಿದರು. ಇನ್ನು ಕೆಲವರು ಅತಿಥಿಗಳಿಗೆ ಪಾನೀಯ ವಿತರಿಸಲು ತೊಡಗಿದರು. ಮತ್ತೆ ಕೆಲವರು ವೇದಿಕೆಯ ಕಡೆ ತೆರಳಿದರು. ಎಲ್ಲೆಡೆ ಶಿಸ್ತು, ಅಚ್ಚುಕಟ್ಟು. ಅವರ ಕೆಲಸದ ರೀತಿ ಎಲ್ಲರಿಗೂ ಖುಷಿಕೊಟ್ಟಿತು. ವಾರ್ಷಿಕೋತ್ಸವ ಮುಗಿಯಿತು. ಎಲ್ಲರೂ ಮನೆಗೆ ಹೊರಟರು. ಆಂಟನಿಯ ತಂದೆ ಮಕ್ಕಳ ಚಟುವಟಿಕೆಗಳನ್ನು ಮೆಚ್ಚಿಕೊಂಡರು. ಅವರಿಗೆ ಕುತೂಹಲ ತಡೆಯಲಾಗಲಿಲ್ಲ. ಮುಖ್ಯೋಪಾಧ್ಯಾಯರಲ್ಲಿ ವಿಚಾರಿಸಿದರು. "ಸರ್, ಈ ಮಕ್ಕಳು"..........



"ಅವರು ನಮ್ಮವರೇ, ಅವರನ್ನು ಕಬ್ ಮತ್ತು ಬುಲ್‌ಬುಲ್‌ಗಳೆಂದು ಕರೆಯುತ್ತಾರೆ." ಮುಖ್ಯೋಪಾಧ್ಯಾಯರು ಹೇಳಿದರು. "ಸರ್ ಹಾಗೆಂದರೇನು?" ಕಬ್ ಮತ್ತು ಬುಲ್‌ಬುಲ್‌ನ ಬಗ್ಗೆ ಮುಖ್ಯೋಪಾಧ್ಯಾಯರು ವಿವರಿಸಿದರು. "ಇದು ಮಕ್ಕಳಿಗೆ ಇರುವ ಸೇವಾ ಸಂಸ್ಥೆ. 1997ರಲ್ಲಿ ಲಂಡನಿನ ಬ್ರೌನ್ಸಿನ ದ್ವೀಪದಲ್ಲಿ ಮೊದಲಿಗೆ ಆರಂಭವಾಯಿತು. ಆರರಿಂದ ಹತ್ತು ವರ್ಷದೊಳಗಿನ ಬಾಲಕರನ್ನು ಕಬ್ ಎಂದೂ ಬಾಲಕಿಯರನ್ನು ಬುಲ್‌ಬುಲ್ ಎಂದೂ ಕರೆಯುತ್ತಾರೆ. ಹತ್ತರಿಂದ ಹದಿನಾರು ವರ್ಷದವರೆಗಿನ ಹುಡುಗರಿಗೆ

ಸ್ಕೌಟ್ ಎಂದೂ ಹುಡುಗಿಯರಿಗೆ ಗೈಡ್ ಎಂದೂ ಹೇಳುತ್ತಾರೆ. ಭಾರತದಲ್ಲಿ 1909ರಲ್ಲಿ ಬೆಂಗಳೂರಲ್ಲಿ ಸ್ಕೌಟ್ ಚಳವಳಿ ಆರಂಭಯಿತು. ಈಗ ಭಾರತದೇಶದೆಲ್ಲೆಡೆ ಹರಡಿಕೊಂಡಿದೆ."

"ಇದರಲ್ಲಿ ಏನೆಲ್ಲ ಇರುತ್ತದೆ?" ಆಂಟನಿಯ ತಂದೆ ಪ್ರಶ್ನಿಸಿದರು.

"ಪ್ರಥಮ ಚಿಕಿತ್ಸೆ, ಸ್ವಯಂ ಸೇವೆ, ರಕ್ಷಣೆ ಮೊದಲಾದವುಗಳನ್ನು ಹೇಳಿಕೊಡುತ್ತಾರೆ. ನೀತಿ, ನಿಯಮ, ಆದರ್ಶ, ಸಹಬಾಳ್ವೆ, ಶಿಸ್ತು, ಉತ್ತಮ ಹವ್ಯಾಸ ಇದರಿಂದ ಮಕ್ಕಳು ಬೆಳೆಸಿಕೊಳ್ಳುತ್ತಾರೆ. ಮಾನಸಿಕ, ದೈಹಿಕ ಬಲವನ್ನು ಹೆಚ್ಚಿಸಿಕೊಳ್ಳುತ್ತಾರೆ." ಎಂದು ಮುಖ್ಯೋಪಾಧ್ಯಾಯರು ಹೇಳಿದರು. "ಹಾಗಾದರೆ ನನ್ನ ಮಗನೂ ಸೇರಬಹುದೇ?" ಆಂಟನಿಯ ತಂದೆ ಕೇಳಿದರು.

"ಖಂಡಿತ ಸೇರಬಹುದು. ನೀವು ಕಬ್ ಮಾಸ್ಟರಲ್ಲಿ ವಿಚಾರಿಸಿರಿ" ಎಂದರು ಮುಖ್ಯೋಪಾಧ್ಯಾಯರು. ಅವರು ಆಂಟನಿಯನ್ನು ಅಂದೇ ಕಬ್ ಗುಂಪಿಗೆ ಸೇರಿಸಿದರು. ತನ್ನ ಮಗ ಉತ್ತಮ ಕಬ್ ಆಗುವನೆಂದು ಕಲ್ಪಿಸಿಕೊಂಡು ಆಂಟನಿಯ ತಂದೆ ಸಂತಸಪಟ್ಟರು.

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ನಿಡಲಾದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.
  1. ಶಾಲೆಯಲ್ಲಿ ವಾರ್ಷಿಕೋತ್ಸವದ ತಯಾರಿ ಹೇಗೆ ನಡೆಯುತ್ತಿತ್ತು?
  2. ಸಮವಸ್ತ್ರ ಧರಿಸಿದ ಮಕ್ಕಳು ಯಾವ ಯಾವ ಕೆಲಸಗಳಲ್ಲಿ ನಿರತರಾಗಿದ್ದರು?
  3. ಬೆಂಗಳೂರಲ್ಲಿ ಸ್ಕೌಟ್ ಚಳವಳಿ ಯಾವಾಗ ಆರಂಭವಾಯಿತು?
  4. ಕಬ್ ಮತ್ತು ಬುಲ್‌ಬುಲ್‌ನ ಧ್ಯೇಯವಾಕ್ಯ ಯಾವುದು?

### ಸರಿಯಾದ ಪದ ಬರೆಯುವ

- ಕೆಳಗೆ ಕೊಡಲಾದ ಪದಗಳ ಗುಂಪಿನಿಂದ ಸರಿಯಾದುದನ್ನು ಆರಿಸಿ ಬರೆಯಿರಿ.
  - ವಾರ್ಷಿಕೋತ್ಸವ, ವರ್ಷಿಕೋತ್ಸವ, ವಾರ್ಷಿಕೋತ್ತವ.
  - ಸಮವಸ್ತ, ಸಮವಸ್ತ್ರ, ಸಮವಶ್ತ್ರ.
  - ಸಂಬ್ರಮ, ಸಬ್ರಂಮ, ಸಂಭ್ರಮ
  - ಮುಖ್ಯೋಪಾಧ್ಯಾಯರು, ಮುಖ್ಯೋಪಧ್ಯಾಯರು, ಮುಖ್ಯೋಪಾದ್ಯಾಯರು.

### ಕಥೆಯನ್ನು ಮುಂದುವರಿಸುವ

- ಕೆಳಗೆ ಕೊಡಲಾದ ಕಥೆಯನ್ನು ಮುಂದುವರಿಸಿ ಬರೆಯಿರಿ. ಯೋಗ್ಯವಾದ ಶೀರ್ಷಿಕೆಯನ್ನು ನೀಡಿರಿ.

ಒಂದೂರಲ್ಲಿ ಒಬ್ಬ ಬಡವನಿದ್ದನು. ಅವನು ಒಂದು ದಿನ ದಾರಿಯಲ್ಲಿ ಹೋಗುತ್ತಿದ್ದಾಗ ಅವನಿಗೆ ಒಂದು ಪೆಟ್ಟಿಗೆ ಕಾಣಿಸಿತು. ಅದಕ್ಕೆ ಬೀಗ ಹಾಕಿತ್ತು. ಬಡವನು ಅದರಲ್ಲಿ ತುಂಬಾ ಹಣ ಅಥವಾ ಬೆಲೆ ಬಾಳುವ ಆಭರಣಗಳು ಇರಬಹುದೆಂದು ಊಹಿಸಿದನು. ಇದರಿಂದ ತನ್ನ ಬಡತನ ನೀಗಬಹುದೆಂದು ಭಾವಿಸಿದನು. ಪೆಟ್ಟಿಗೆಯನ್ನು ಮನೆಗೆ ತೆಗೆದುಕೊಂಡು ಹೋದನು. ಅವನ ಹೆಂಡತಿ, ಮಕ್ಕಳೆಲ್ಲ ಅವನ ಸುತ್ತ ನೆರೆದರು. ಅವನು ಏನೋ ತಂದಿದ್ದಾನೆಂದು ಎಲ್ಲರಿಗೂ ಕುತೂಹಲ. ಬಡವನು ಸುತ್ತಿಗೆಯನ್ನು ತಂದನು. ಎಲ್ಲರೂ ಆಸಕ್ತಿಯಿಂದ ನೋಡುತ್ತಿದ್ದರು. ಒಂದೇ ಹೊಡೆತಕ್ಕೆ ಬೀಗವನ್ನು ಮುರಿದನು. ಅವನು ನಿಧಾನವಾಗಿ ಬಾಗಿಲನ್ನು ತೆರೆದನು.



# ತಿಲಕಾಷ್ಠಮಹಿಷಬಂಧನ


(ಕೃಷ್ಣದೇವರಾಯನ ಆಸ್ಥಾನ ಪಂಡಿತರೆಲ್ಲ ಯಥೋಚಿತ ಆಸನಗಳಲ್ಲಿ ಕುಳಿತಿದ್ದಾರೆ. ಕೃಷ್ಣದೇವರಾಯ ಸಿಂಹಾಸನದಲ್ಲಿ ಆಸೀನನಾಗಿದ್ದಾನೆ)

## ದೃಶ್ಯ 1

ಸೇವಕ : (ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ.........

ರಾಜ : ಏನಾಯಿತು? ಏಕೆ ಬಂದೆ?

ಸೇವಕ : ದೊರೆಗಳೇ....... ಹೊರಬಾಗಿಲಲ್ಲಿ ದೊಡ್ಡ ಪಂಡಿತರೊಬ್ಬರು ಇದ್ದಾರೆ. ಒಳಗೆ ಬರಲು ಅಪ್ಪಣೆ ಕೇಳಿದ್ದಾರೆ.



ರಾಜ : ಹೌದೇ...... ಒಳಗೆ ಬರಹೇಳು.

(ಪಂಡಿತರು ದರ್ಬಾರನ್ನು ಪ್ರವೇಶಿಸಿಸುವರು)

ಪಂಡಿತ : ಮಹಾರಾಜರಿಗೆ ಜಯವಾಗಲಿ.......

ರಾಜ : ಪಂಡಿತರೇ ....... ಈ ಆಸನವನ್ನು ಅಲಂಕರಿಸಿ ........ ತಾವು ಯಾರು? ಬಂದ ಉದ್ದೇಶವೇನು? ಪರಿಚಯ ತಿಳಿಸುವಿರಾ?

ಪಂಡಿತ : ಸ್ವಾಮೀ.......... ನಾನು ವಿದ್ಯಾನಿಧಿ ಎಂಬ ಪಂಡಿತ. ಉಜ್ಜಯಿನಿಯಿಂದ ಬಂದಿದ್ದೇನೆ. ಕಾಶೀನಗರದ ಪಂಡಿತರೆಲ್ಲ ವಾದದಲ್ಲಿ ಸೋತು ನನಗೆ ಶರಣಾಗಿದ್ದಾರೆ. ನಿಮ್ಮ ಸಭೆಯಲ್ಲಿ ಮಹಾ ಪಂಡಿತರಿದ್ದಾರೆ ಎಂದು ಕೇಳಿದ್ದೇನೆ. ಯಾರಾದರೂ ಸಿದ್ಧರಿದ್ದರೆ ನನ್ನೊಡನೆ ವಾದ ಮಾಡಲು ಮುಂದೆ ಬರಲಿ, ಇಲ್ಲವಾದರೆ ಸೋಲನ್ನು ಒಪ್ಪಿಕೊಳ್ಳಲಿ.

ರಾಜ : ಹೌದೇ?..... ನಮ್ಮಲ್ಲಿ ಅಷ್ಟದಿಗ್ಗಜಗಳೇ ಇದ್ದಾರೆ. ನೋಡೋಣ....... ನಮ್ಮಲ್ಲಿ ಯಾರು ಬೇಕಾದರೂ ವಾದ ಮಾಡಬಹುದು? ಪೆದ್ದಣ್ಣ...... ತಿಮ್ಮಣ್ಣ..... ರಾಮಕೃಷ್ಣ........ ನಿಮ್ಮಲ್ಲಿ ಯಾರು ವಾದಕ್ಕೆ ಸಿದ್ಧರಿದ್ದೀರಿ? (ವಿದ್ಯಾನಿಧಿಗಳತ್ತ ತಿರುಗಿ) ಪಂಡಿತರೇ, ನಮ್ಮ ಸಭೆ ಸಾಮಾನ್ಯವಾದುದಲ್ಲ. ಇಲ್ಲಿರುವವರೆಲ್ಲ ಪಂಡಿತರೇ. ವಿದ್ಯಾನಿಧಿಗಳೇ ನೀವು ಈ ದಿನ ಪ್ರಯಾಣದಿಂದ ಆಯಾಸಗೊಂಡಿರುವಿರಿ. ಹೋಗಿ ವಿಶ್ರಾಂತಿ ಪಡೆಯಿರಿ. ನಾಳೆಯ ದಿನ ಆಸ್ಥಾನದಲ್ಲಿ ವಾದ ನಡೆಯಲಿ. ನಾನೇ ತೀರ್ಪುಗಾರನಾಗಿ ಬರುತ್ತೇನೆ. ನನ್ನ ಪಂಡಿತರು ಸೋತರೆ ನಿಮ್ಮ ಸೇವಕರಾಗುತ್ತಾರೆ, ಗೆದ್ದರೆ ನೀವು ದಾಸರಾಗುತ್ತೀರಿ. ಒಪ್ಪಿಗೆ ತಾನೇ?

ಪಂಡಿತ : ಮಹಾರಾಜರ ಅಪ್ಪಣೆಯಂತೆಯೇ ಆಗಲಿ. ನಾನೀಗ ವಿಶ್ರಾಂತಿಗೆ ತೆರಳುತ್ತೇನೆ. (ಪಂಡಿತ ತೆರಳುವನು)

ಮಹಾರಾಜ : ಪಂಡಿತವರ್ಯರೇ, ಈ ಪಂಡಿತ ವಿದ್ಯಾನಿಧಿಯ ಸವಾಲನ್ನು ಸ್ವೀಕರಿಸುವವರು ಯಾರು? ನಾಳಿನ ದಿನ ಇವರ ಗರ್ವವನ್ನು ಯಾರು ಇಳಿಸುತ್ತೀರಿ? (ಪಂಡಿತಮಂಡಳಿಯ ಕಡೆಗೆ ನೋಡುವನು)

ಪೆದ್ದಣ್ಣ : (ಅತ್ತಿತ್ತ ನೋಡಿ) ಮಹಾರಾಜರೇ ....... ನನಗೆ........ ಈದಿನ ಅಷ್ಟಾಗಿ ಆರೋಗ್ಯ ಸರಿಯಿಲ್ಲ .......... ನಾಳೆ ಹೇಗೋ........ ಬೇರೆ ಯಾರಾದರೂ ಆಗಲಿ.

ತಿಮ್ಮಣ್ಣ : (ತಲೆತುರಿಸಿಕೊಂಡು) ಅರಸರೇ..... ನಾಳೆ ನನಗೆ ಜರೂರು ಕೆಲಸವಿದೆ. ಮನೆಗೆ ನೆಂಟರು ಬರುತ್ತಾರೆ. ಪಂಡಿತರೊಡನೆ ವಾದಕ್ಕೆ ನನಗೆ ಸಮಯ ಸಿಗುವುದು ದುರ್ಲಭ. ಪ್ರಭುಗಳೇ, ಮಹಾ ಪಂಡಿತರಾದ ವಿದ್ಯಾನಿಧಿಯವರ ಎದುರು ವಾದ ಮಾಡಲು ನನ್ನಿಂದಾಗದು.

ಮಹಾರಾಜ : ರಾಮಕೃಷ್ಣಾ...... ನೀನು ಏನು ತೀರ್ಮಾನಿಸಿರುವೆ? ನನ್ನ ಅಷ್ಟದಿಗ್ಗಜಗಳೆಲ್ಲ ಈ ದಿನ ವಿದ್ಯಾನಿಧಿಯ ಹೆಸರು ಕೇಳಿಯೇ ಹೆದರಿದಂತಿದೆಯಲ್ಲ!

ರಾಮಕೃಷ್ಣ : ಪ್ರಭುಗಳೇ...... ನಾನು ಸಿದ್ಧ. ಆ ಮಾತೆ ಕಾಳಿಕಾದೇವಿಯ ಅನುಗ್ರಹ ಇರುವವರೆಗೆ ನಾನು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ. ಅಂತಹ ನೂರು ವಿದ್ಯಾನಿಧಿಗಳೇ ಬಂದರೂ ನಾನು ಬಗ್ಗುವವನಲ್ಲ. ನಾಳೆ ಏನಾಗುತ್ತದೋ ನೋಡಿ. ನೀವು ನಿಶ್ಚಿಂತೆಯಿಂದ ಅರಮನೆಗೆ ತೆರಳಿ ಮಹಾಪ್ರಭುಗಳೇ.... ಈ ತೆನ್ನಾಲಿ ರಾಮಕೃಷ್ಣ ಇರುವವರೆಗೆ ನಿಮಗೆ ಹೆದರಿಕೆ ಬೇಡ.

ಮಹಾರಾಜ : ಶಹಭಾಷ್....... ರಾಮಕೃಷ್ಣ, ಶಹಭಾಷ್..... ನಾಳೆಯ ದಿನ ಸಮಯಕ್ಕೆ ಸರಿಯಾಗಿ ವಾದ ನಡೆಸಲು ಏರ್ಪಾಡಾಗಲಿ. ಎಲ್ಲರೂ ತೆರಳಿರಿ. (ಸಭೆ ಮುಗಿಯುವುದು)

## ದೃಶ್ಯ 2

(ತೆನ್ನಾಲಿ ರಾಮಕೃಷ್ಣನ ಮನೆ. ಅವನು ಆಲೋಚಿಸುತ್ತ ಕುಳಿತಿದ್ದಾನೆ. ಅವನ ಪತ್ನಿ ಬರುತ್ತಾಳೆ)

ರಾಮಕೃಷ್ಣ : (ಸ್ವಗತ) ಛೆ....... ಏನು ಮಾಡೋಣ...... ವಿದ್ಯಾನಿಧಿಯಾದರೋ ನಿಜಕ್ಕೂ ಸಕಲ ವಿದ್ಯಾಪಾರಂಗತರು. ಅವರನ್ನು ಮೀರಿಸುವ ಪಂಡಿತರು ಇನ್ನೊಬ್ಬರಿಲ್ಲ. ಮರ್ಯಾದೆಗೆ ಹೆದರಿ ನಮ್ಮ ಆಸ್ಥಾನ ಪಂಡಿತರೆಲ್ಲ ಪಿಳ್ಳೆ ನೆಪ ಹೇಳಿ ತಪ್ಪಿಸಿಕೊಂಡರು. ಮಹಾರಾಜರು ನನ್ನನ್ನೇ ನಂಬಿಕೊಂಡಿದ್ದಾರೆ....... ಏನಾದರೂ ದಾರಿ ಕಂಡುಕೊಳ್ಳಲೇಬೇಕು.

ಪತ್ನಿ : (ಬಳಿಗೆ ಬರುತ್ತಾ) ಏನ್ರೀ.... ಕವಿಗಳೇ..... ಇಂದು ಆಸ್ಥಾನದಲ್ಲಿ ಏನು ವಿಶೇಷ? ಭಾರೀ ಯೋಚನೆಯಲ್ಲಿರುವಂತಿದೆ?

ರಾಮಕೃಷ್ಣ : ನಿನಗೇನು? ನಮ್ಮ ಕಷ್ಟ ನಿನಗೆ ತಿಳಿಯುವುದೋ?

ಪತ್ನಿ : ಹೇಳಿದರೆ ತಾನೇ ತಿಳಿಯುವುದು? ಅದೇನು ಸಂಕಟ ಬಂದಿದೆ ನಮ್ಮ ಪ್ರಭುಗಳಿಗೆ? ಏನೆಂದು ಹೇಳಬಾರದೇ?

ರಾಮಕೃಷ್ಣ : ಅದು ದೊಡ್ಡ ಸಂಕಟ. ನಮ್ಮ ಆಸ್ಥಾನಕ್ಕೆ ಇಂದು ದೊಡ್ಡ ಪಂಡಿತರಾದ ವಿದ್ಯಾನಿಧಿಗಳು ಬಂದಿದ್ದಾರೆ. ಯಾರಾದರೂ ವಾದ ಮಾಡಿ ಅವರನ್ನು ಸೋಲಿಸಬೇಕು. ಇಲ್ಲವಾದರೆ....... ಇಲ್ಲವಾದರೆ ನಾವೆಲ್ಲ ಅವರ ದಾಸರಾಗಬೇಕು.

ಪತ್ನಿ : ಅದಕ್ಕೆ ನಿಮಗೇನು? ಅಲ್ಲಿ ರಾಶಿರಾಶಿ ಪಂಡಿತರಿದ್ದಾರೆ. ನೀವು ಎಷ್ಟಾದರೂ ವಿಕಟಕವಿಗಳು.

ರಾಮಕೃಷ್ಣ : ಅದೇ ಗ್ರಹಚಾರ........ ಅವರೆಲ್ಲ ಕುಂಟುನೆಪ ಹೇಳಿ ಜಾರಿದ್ದಾರೆ. ಮಹಾರಾಜರು ಈಗ ನನ್ನನ್ನೇ ನಂಬಿದ್ದಾರೆ. ಸೋತರೆ ರಾಜರಿಗೆ ಅವಮಾನವಾಗುತ್ತದೆ. ಏನು ಮಾಡಲೂ ತೋಚುತ್ತಿಲ್ಲ.

ಪತ್ನಿ : ಹಹ್ಹ....... ಒಳ್ಳೆಯದಾಯಿತು. ಮಹಾರಾಜರ ಆಸ್ಥಾನ ಪಂಡಿತರ ಸೊಕ್ಕು ಮಿತಿಮೀರಿದೆ. ಒಳ್ಳೆ ಪಾಠ ಕಲಿಯಲಿ........ ಅದೆಲ್ಲ ಹೋಗಲಿ. ನಾನು ಬಂದದ್ದು ಅದಕ್ಕಲ್ಲ....... ನಮ್ಮ ಎಳ್ಳು ಬೆಳೆ ಕೀಳಿಸಿ ಆಗಿದೆ. ಎಳ್ಳು ಬಿಡಿಸಿದ ಗಿಡಗಳನ್ನು ಎಲ್ಲಿ ಹಾಕಿಸಲಿ?

ರಾಮಕೃಷ್ಣ : ಭೇಷ್........ ಪ್ರಿಯೆ..... ಭೇಷ್...... ನನಗೆ ಸರಿಯಾದ ಮಾರ್ಗ ತೋರಿಸಿದೆ. ಎಳ್ಳಿನ ಕಟ್ಟಿಗೆಯನ್ನು ಕೊಟ್ಟಿಗೆಯ ಮೂಲೆಯಲ್ಲಿ ಪೇರಿಸಿಡಲಿ. ಮೊದಲು ಇಲ್ಲಿಗೆ ನಾಲ್ಕು ಕಟ್ಟಿಗೆ ತರಲಿ. ಅದನ್ನು ಚೆನ್ನಾಗಿ ಕತ್ತರಿಸಿ ಕಟ್ಟು ಕಟ್ಟಲಿ. ನೀನು ಅದನ್ನು ಒಂದು ಹೊಸ ರೇಶಿಮೆ ವಸ್ತ್ರದಲ್ಲಿ ಸುತ್ತಿ ಇಡಬೇಕು. ನಾಳೆ ನಾನು ಹೊರಟಾಗ ನಮ್ಮ ಹುಡುಗರು ಆ ಕಟ್ಟವನ್ನು ಎತ್ತಿಕೊಂಡು ಬರಬೇಕು. ತಿಳಿಯಿತೇ?

ಪತ್ನಿ : ಆಗಲಿ....... ಆಗಲಿ......... ತಾವು ಹೇಳಿದಂತೆ ಮಾಡಿಸುತ್ತೇನೆ. ಆದರೆ ಈ ಎಳ್ಳಿನ ಕಟ್ಟಿಗೆಗೆ ರೇಶಿಮೆ ವಸ್ತ್ರ ಏಕೋ.......?

ರಾಮಕೃಷ್ಣ : ಅದೆಲ್ಲ ನಾಳೆ ಹೇಳುತ್ತೇನೆ. ಈಗ ಹೇಳಿದ ಕೆಲಸ ನೆನಪಿರಲಿ. ನನಗೆ ಸ್ವಲ್ಪ ಕೆಲಸವಿದೆ. ಹೊರಗೆ ಹೋಗಿ ಬರುತ್ತೇನೆ. (ಹೋಗುವನು)



## ದೃಶ್ಯ 3

(ಆಸ್ಥಾನದಲ್ಲಿ ಪಂಡಿತರು ಕುಳಿತಿದ್ದಾರೆ. ಮಧ್ಯದಲ್ಲಿ ಮಹಾರಾಜರು ಆಸೀನರಾಗಿದ್ದಾರೆ. ತೆನ್ನಾಲಿ ರಾಮಕೃಷ್ಣನೂ ರೇಶಿಮೆ ಕಟ್ಟನ್ನು ಎತ್ತಿಕೊಂಡ ಮಕ್ಕಳೂ ಪ್ರವೇಶಿಸುತ್ತಾರೆ. ಒಂದು ಪೀಠದಲ್ಲಿ ಶಿಷ್ಯರು ರೇಶಿಮೆ ವಸ್ತ್ರದಿಂದ ಸುತ್ತಿದ ಗಂಟನ್ನು ಇಡುತ್ತಾರೆ)

ವಿದ್ಯಾನಿಧಿ : ಓಹೋ....... ತಾವೇ ಏನು ನನ್ನೊಡನೆ ವಾದ ಮಾಡುವ ಪಂಡಿತರು?

ರಾಮಕೃಷ್ಣ : ಹೌದು...... ವಿದ್ಯಾನಿಧಿಗಳೇ..... ನೀವು ವಿದ್ಯಾನಿಧಿಗಳಾದರೆ ನಾನು ವಿದ್ಯಾವಾರಿಧಿ.

ವಿದ್ಯಾನಿಧಿ : ಒಳ್ಳೆಯದು......... ಸರಿ....... ಸರಿ....... ವಾದ ಮಾಡಲು ಯಾವ ಗ್ರಂಥವನ್ನು ಆರಿಸಿರುವಿರಿ?

ರಾಮಕೃಷ್ಣ : ನಿಮಗೆ ಯಾವ ಗ್ರಂಥಬೇಕೋ ಆ ಗ್ರಂಥವನ್ನು ಆಯ್ಕೆಮಾಡಿಕೊಳ್ಳಬಹುದು.

ವಿದ್ಯಾನಿಧಿ : ಹಾಗೋ...... ಬೇಡ...... ನಿಮಗೇ ಆ ಅವಕಾಶವನ್ನು ಕೊಟ್ಟಿದ್ದೇನೆ. ವಿದ್ಯಾವಾರಿಧಿಗಳೇ, ನಿಮಗಾವ ಗ್ರಂಥಬೇಕೋ ಆರಿಸಿಕೊಳ್ಳಿ. ಯಾವುದೇ ಗ್ರಂಥವಾದರೂ ನಾನು ವಾದ ಮಂಡಿಸಬಲ್ಲೆ.

ರಾಮಕೃಷ್ಣ : ವಿದ್ಯಾನಿಧಿಗಳೇ....... ನಾನು ತಮ್ಮಷ್ಟು ದೊಡ್ಡ ಪಂಡಿತನಲ್ಲ. ರಾಯರ ಆಸ್ಥಾನದಲ್ಲಿ ಆಶ್ರಯಪಡೆದ ಸಾಮಾನ್ಯ. ಅದೋ ಅಲ್ಲಿ ನೋಡಿ. ಮಹಾ ಮಹಾ ಪಂಡಿತರೆಲ್ಲ ಸಾಲಾಗಿ ಕುಳಿತಿದ್ದಾರೆ. ಆದರೆ ನಿಮ್ಮನ್ನು ಎದುರಿಸಲು ನಾನೇ ಸಾಕು. ಇಲ್ಲಿ ನೋಡಿ. ನಿಮ್ಮೊಡನೆ ವಾದ ಮಾಡಲು ನಾನು ತಂದಿರುವ ಗ್ರಂಥ. ಇದರ ಹೆಸರು ತಿಲಕಾಷ್ಠಮಹಿಷಬಂಧನ. ಇದರ ಪರಿಚಯ ಈ ಚಿಕ್ಕ ಹುಡುಗರಿಗೂ ಇದೆ (ರೇಶಿಮೆಯ ಗಂಟನ್ನು ಎತ್ತಿ ತೋರಿಸುವನು).

ವಿದ್ಯಾನಿಧಿಗಳೇ ಈಗ ವಾದವನ್ನು ಆರಂಭಿಸೋಣವೇ?

ವಿದ್ಯಾನಿಧಿ : (ಸ್ವಗತ) ನಾನು ಸಾವಿರಾರು ಗ್ರಂಥಗಳನ್ನು ಓದಿದ್ದೇನೆ. ನೂರಾರು ಗ್ರಂಥಗಳು ನನಗೆ ಕರತಲಾಮಲಕ, ಆದರೆ ಈ ಗ್ರಂಥದ ಹೆಸರನ್ನೆ ಕೇಳಿಲ್ಲವಲ್ಲಾ......... ವಿದ್ಯಾವಾರಿಧಿಗಳೇ..... ನಾನು ಈ ಗ್ರಂಥವನ್ನು ಚಿಕ್ಕವನಿದ್ದಾಗ ಓದಿದ ನೆನಪು. ಬಹಳ ವರ್ಷಗಳು ಕಳೆದು ಹೋಗಿವೆ. ಆದ್ದರಿಂದ ನನಗೆ ಸ್ವಲ್ಪ ಸಮಯ ಬೇಕು (ವಿನಯದಿಂದ) ಮಹಾರಾಜರೇ...... ತಾವು ನನಗೆ ನಾಳಿನವರೆಗೆ ಅವಧಿ ಕೊಟ್ಟರೆ.......... ನಾನು ನಾಳೆ ಬಂದು ವಾದ ಮಂಡಿಸುತ್ತೇನೆ.

ಮಹಾರಾಜ : ಹಾಗೆಯೇ ಆಗಲಿ ....... ಪಂಡಿತರೇ ತಮಗೆ ಒಂದು ದಿನದ ಅವಧಿಯನ್ನು ನೀಡಿದ್ದೇವೆ. ನಾಳೆ ಸರಿಯಾಗಿ ಇದೇ ಸಮಯಕ್ಕೆ ಇಲ್ಲಿ ವಾದ ಮಂಡನೆ ನಡೆಯಲಿ. ಇಂದಿನ ಸಭೆಯನ್ನು ಮುಗಿಸುತ್ತಿದ್ದೇವೆ.

ಪಂಡಿತರು : ಮಹಾರಾಜರಿಗೆ ಜಯವಾಗಲಿ. ಕೃಷ್ಣದೇವರಾಯರಿಗೆ ಜಯವಾಗಲಿ........... (ಹೋಗುವರು)

## ದೃಶ್ಯ 4

(ಆಸ್ಥಾನದಲ್ಲಿ ಎಲ್ಲರೂ ಸೇರಿದ್ದಾರೆ. ಎಲ್ಲರೂ ವಿದ್ಯಾನಿಧಿಯನ್ನು ಕಾಯುತ್ತಿದ್ದಾರೆ)

ಮಹಾರಾಜ : ಎಲ್ಲೈ ಸೇವಕರೇ ಯಾರಲ್ಲಿ?

ಸೇವಕ : ಮಹಾಪ್ರಭುಗಳಿಗೆ ಜಯವಾಗಲಿ (ವಂದಿಸಿ) ಏನಪ್ಪಣೆ?

ಮಹಾರಾಜ : ಕೂಡಲೇ ಹೋಗಿ ವಿದ್ಯಾನಿಧಿ ಪಂಡಿತರನ್ನು ಕರೆದುಕೊಂಡು ಬಾ..........

ಸೇವಕ : ಹಾಗೆಯೇ ಆಗಲಿ........ (ಹೋಗಿ ಹುಡುಕಿ ಹಾಗೆಯೆ ಹಿಂದಕ್ಕೆ ಬರುವನು) ದೊರೆಗಳೇ....... ಆ ಪಂಡಿತರು ಅಲ್ಲಿಲ್ಲ......... ಅವರು ನಿನ್ನೆಯೇ ಗಂಟು ಮೂಟೆ ಕಟ್ಟಿಕೊಂಡು ಹೋಗಿದ್ದಾರಂತೆ. ಸುತ್ತಮುತ್ತಲ ಜನ ಹೇಳಿದರು.

ಮಹಾರಾಜ : ಆಶ್ಚರ್ಯ ...... ಪರಮಾಶ್ಚರ್ಯ....... ಆಗಲಿ...... ರಾಮಕೃಷ್ಣ. ಆ ಗ್ರಂಥ ಯಾವುದದು? ತಿಲಕಾಷ್ಠಮಹಿಷಬಂಧನವಲ್ಲವೇ?.... (ಯೋಚಿಸುತ್ತಾ) ನಾವೂ ಇದುವರೆಗೆ ಆ ಹೆಸರನ್ನೇ ಕೇಳಿಲ್ಲವಲ್ಲಾ. ಅಯ್ಯಾ...... ನಿಜವಾಗಿ ನಿನ್ನ ಆ ರೇಶಿಮೆ ಗಂಟಿನಲ್ಲಿರುವ ಗ್ರಂಥ ಯಾವುದು? ಅದನ್ನು ರಚಿಸಿದವರು ಯಾರು? ಅದರಲ್ಲಿ ಯಾವ ವಿಚಾರ ಅಡಗಿದೆ? ಈಗಲಾದರೂ ತಿಳಿಸಬಹುದೇ?

ರಾಮಕೃಷ್ಣ : ದೊರೆಗಳೇ......... ನನ್ನ ಹಿತ್ತಿಲಲ್ಲಿ ಬೆಳೆದ ಎಳ್ಳಿನ ಕಟ್ಟಿಗೆ ಇದು. ಇದಕ್ಕೆ ತಿಲಕಾಷ್ಠವೆಂದು ಹೆಸರಿಟ್ಟಿದ್ದೇನೆ. (ಕಟ್ಟನ್ನು ಬಿಡಿಸಿ ತೋರಿಸುತ್ತಾ) ಇದೋ ನೋಡಿ ಕೋಣನನ್ನು ಕಟ್ಟುವ ಹಗ್ಗ ಇದುವೇ ಮಹಿಷಬಂಧನ. ಪ್ರಭುಗಳೇ ಇವೆರಡೂ ಸೇರಿದರೆ 'ತಿಲಕಾಷ್ಠಮಹಿಷಬಂಧನ'

ಮಹಾರಾಜ : ರಾಮಕೃಷ್ಣಾ....... ಶಹಭಾಷ್..... ನಿನ್ನ ಚಾತುರ್ಯಕ್ಕೆ ಮೆಚ್ಚಿದ್ದೇನೆ. ನಮ್ಮ ಗೌರವ ಉಳಿಸಿದ್ದಿ. ಇದೋ ಈ ಬಹುಮಾನವನ್ನು ಸ್ವೀಕರಿಸು. (ಬಹುಮಾನ ಕೊಡುವನು)

ಎಲ್ಲರೂ : ಮಹಾರಾಜರಿಗೆ ಜಯವಾಗಲಿ. ರಾಮಕೃಷ್ಣನಿಗೆ ಜಯವಾಗಲಿ.

(ತೆರೆ ಬೀಳುವುದು)

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

  1. ವಿದ್ಯಾನಿಧಿ ಯಾರು?
  2. ವಿದ್ಯಾನಿಧಿಯು ರಾಜನ ಆಸ್ಥಾನದಲ್ಲಿ ತನ್ನನ್ನು ಪರಿಚಯಿಸಿಕೊಂಡದ್ದು ಹೇಗೆ?
  3. ತಿಲಕಾಷ್ಠಮಹಿಷಬಂಧನ ಎಂದರೇನು?
  4. ವಿದ್ಯಾನಿಧಿಗಳು ಒಡ್ಡಿದ ಪಂಥ ಯಾವುದು?

### ಬರೆಯುವ

- ಈ ಕೆಳಗಿನ ಹೇಳಿಕೆಗಳನ್ನು ಯಾರು ಯಾರಿಗೆ ಹೇಳಿದರು ಎಂದು ಬರೆಯಿರಿ.

  - ನಾನು ನಾಳೆ ಬಂದು ವಾದ ಮಂಡಿಸುತ್ತೇನೆ
  - ನಮ್ಮಲ್ಲಿ ಅಷ್ಟದಿಗ್ಗಜಗಳೇ ಇದ್ದಾರೆ
  - ಮಹಾರಾಜರೇ ನನಗೆ ಈ ದಿನ ಅಷ್ಟಾಗಿ ಆರೋಗ್ಯ ಸರಿಯಿಲ್ಲ
  - ಪ್ರಭುಗಳೇ ನಾನು ಸಿದ್ಧ. ಆ ಮಾತೆ ಕಾಳಿಕಾ ದೇವಿಯ ಅನುಗ್ರಹ ಇರುವವರೆಗೆ ನಾನು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ.
  - ಅದಕ್ಕೆ ನಿಮಗೇನು? ಅಲ್ಲಿ ರಾಶಿರಾಶಿ ಪಂಡಿತರಿದ್ದಾರೆ

### ಊಹಿಸಿ ಹೇಳುವ

- ವಿದ್ಯಾನಿಧಿಗಳು ರಾಮಕೃಷ್ಣನೊಂದಿಗೆ 'ತಿಲಕಾಷ್ಠಮಹಿಷಬಂಧನ'ದ ಕುರಿತು ವಾದಮಾಡಲು ಒಪ್ಪಿಕೊಂಡಿದ್ದರೆ ಏನಾಗುತ್ತಿತ್ತು? ಊಹಿಸಿ ಹೇಳಿರಿ.

## ವಿರೋಧಾರ್ಥ ಪದ ಬರೆಯುವ

- ಅಡಿಗೆರೆ ಎಳೆದ ಪದಗಳ ವಿರೋಧಾರ್ಥ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆಯಿರಿ.
    - ಸೆಕೀನಳಿಗೆ ಪರೀಕ್ಷೆಯು ಸುಲಭವಾಗಿತ್ತು.
    - ಡೊಂಕಾಟದಲ್ಲಿ ಸುಮಾಳ ಗುಂಪು ಗೆಲುವು ಸಾಧಿಸಿತ್ತು.
    - ಅಶೋಕನು ಅಸಾಮಾನ್ಯ ಪ್ರತಿಭೆಯ ಹುಡುಗ.
    - ರೀಟಾಳು ಬರೆದ ಉತ್ತರ ತಪ್ಪಾಗಿತ್ತು
    - ಗುರುಹಿರಿಯರಿಗೆ ಅಗೌರವ ತೋರಬಾರದು.

## ಲೇಖನ ಚಿಹ್ನೆಗಳನ್ನುಪಯೋಗಿಸಿ ಬರೆಯುವ

- ಕೆಳಗಿನ ಗದ್ಯಭಾಗಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನುಪಯೋಗಿಸಿ ಬರೆಯಿರಿ.

ಕಾಗೆರಾಯ ದಯವಿಟ್ಟು ನನಗೆ ನಿನ್ನ ಗೂಡಿನಲ್ಲಿ ಸ್ವಲ್ಪ ಜಾಗ ಕೊಡುವೆಯಾ ಈ ಚಳಿಗೆ ನಾನು ಬದುಕಲಾರೆ ಎಂದಿತು ಗುಬ್ಬಿ ಛೀ ಹೋಗಾಚೆ ನಿನಗಿಲ್ಲಿ ಜಾಗವಿಲ್ಲ ಎಂದು ಗದರಿಸಿತು ಕಾಗೆ ಗುಬ್ಬಿಯು ಇನ್ನೇನು ಮಾಡುವುದು ಎಂದು ಚಿಂತಿಸುತ್ತಾ ಅಲ್ಲಿಂದ ಹಾರಿಹೋಯಿತು

## ಅಭಿನಯಿಸುವ

- ಪಾತ್ರಗಳನ್ನು ಹಂಚಿಕೊಂಡು 'ತಿಲಕಾಷ್ಠಮಹಿಷಬಂಧನ' ನಾಟಕವನ್ನು ಅಭಿನಯಿಸಿರಿ.

## ಕಥೆ ಹೇಳುವ

- 'ತಿಲಕಾಷ್ಠಮಹಿಷಬಂಧನ' ನಾಟಕವನ್ನು ಕಥೆಯಾಗಿ ಹೇಳಿರಿ.

## ಸಂಗ್ರಹಿಸುವ

- ಬುದ್ಧಿವಂತಿಕೆಯಿಂದ ಸಮಸ್ಯೆಗಳನ್ನು ಪರಿಹರಿಸಿಕೊಂಡ ಅದೆಷ್ಟೋ ಕಥೆಗಳಿವೆ. ಅಂತಹ ಕಥೆಗಳನ್ನು ಸಂಗ್ರಹಿಸಿ ಬಾಲಸಭೆಯಲ್ಲಿ ಮಂಡಿಸಿರಿ.

# ಅರ್ಥಕೋಶ

ಅಕ್ಕರೆ – ಪ್ರೀತಿ
ಅನುಗ್ರಹ – ಕೃಪೆ, ದಯೆ
ಅಣಿಯಾಗು – ತಯಾರಾಗು
ಅಪ್ಪಣೆ – ಆಜ್ಞೆ
ಅಲಂಕರಿಸು – ಸಿಂಗರಿಸು
ಅವಧಿ – ಸಮಯದ ಪರಿಮಿತಿ
ಅವಮಾನ – ಅಗೌರವ, ಅಪಮಾನ
ಅಷ್ಟದಿಗ್ಗಜರು – ಕೃಷ್ಣ ದೇವರಾಯನ ಆಸ್ಥಾನದಲ್ಲಿದ್ದ ಎಂಟು ಮಂದಿ ವಿದ್ವಾಂಸರು
– 1. ತೆನ್ನಾಲಿ ರಾಮಕೃಷ್ಣ
– 2. ನಂದಿ ತಿಮ್ಮಣ್ಣ
– 3. ಅಲ್ಲಸಾನಿ ಪೆದ್ದಣ್ಣ
– 4. ಧೂರ್ಜಟಿ
– 5. ಪಿಂಗಳಿ ಸೂರಣ್ಣ
– 6. ಅಯ್ಯಲರಾಜು ರಾಮಭದ್ರು
– 7. ರಾಮ ರಾಜು ಭೂಷಂಧು
– 8. ಮಾದಯ್ಯಗಿರಿ ಮಲ್ಲಣ್ಣ.
ಆಯಾಸ – ಬಳಲಿಕೆ
ಆಸ್ಥಾನ – ದರಬಾರು, ರಾಜಸಭೆ
ಆಸೀನನಾಗು – ಕುಳಿತುಕೊಳ್ಳು
ಉದ್ದೇಶ – ಗುರಿ
ಎಡೆ – ನಡುವೆ, ಮಧ್ಯ
ಎಡೆಯಾಗು – ಸಾಧ್ಯವಾಗು
ಏಟು – ಪೆಟ್ಟು
ಏರ್ಪಾಡು – ಸಿದ್ಧತೆ
ಒಪ್ಪೊತ್ತು – ಒಂದು ಹೊತ್ತು
ಕರತಲಾಮಲಕ – ಚೆನ್ನಾಗಿ ತಿಳಿದುದು, ಅಂಗೈಯ ನೆಲ್ಲಿಕಾಯಿ
ಕೊಪ್ಪರಿಗೆ – ಅಗಲವಾದ ಬಾಯಿಯುಳ್ಳ ಲೋಹದ ಪಾತ್ರೆ, ಕಡಾಯಿ
ಕ್ರಯ – ಬೆಲೆ
ಗಟ್ಟಿಗ – ಸಮರ್ಥ, ಶೂರ
ಗರ್ವ – ಅಹಂಕಾರ
ಗ್ರಹಚಾರ – ದುರದೃಷ್ಟ, ದುರವಸ್ಥೆ, ಗ್ರಹಗಳ ಚಲನೆ
ಚಾತುರ್ಯ – ಬುದ್ಧಿವಂತಿಕೆ, ಜಾಣ್ಮೆ
ಚೆರಿಗೆ – ಪಾತ್ರೆ
ಜರಗು – ನೆರವೇರು
ಜರೂರು – ಕೂಡಲೇ ಆಗಬೇಕಾದ, ಅಗತ್ಯ
ಜವ್ವನಿಗ – ಯುವಕ
ತಿಲಕಾಷ್ಠ – ಎಳ್ಳಿನ ಕಟ್ಟಿಗೆ
ತೀರ್ಪುಗಾರ – ನಿರ್ಣಾಯಕ
ತಿಂಡಿಬಾಕ – ಆಸೆಬಾಕ
ತೆರಳು – ಹೋಗು
ತೋಚು – ತೋರು
ತಂತ್ರ – ಉಪಾಯ
ದರ್ಬಾರು – ರಾಜಸಭೆ

| | | |
|---|---|---|
| ದಾರಿ | – | ಹಾದಿ |
| ದಾಸ | – | ಆಳು, ಸೇವಕ |
| ದುರ್ಲಭ | – | ಕಷ್ಟ, ಅಪರೂಪದ, ಸಿಗಲು ಸಾಧ್ಯವಿಲ್ಲದ |
| ದೃಷ್ಟಿ | – | ನೋಟ |
| ದೊರೆ | – | ರಾಜ, ಅರಸ |
| ನವಾಬ | – | ಮುಸಲ್ಮಾನ ದೊರೆ |
| ನಿಶ್ಚಿಂತೆ | – | ಚಿಂತೆ ಇಲ್ಲದೆ |
| ಪತ್ನಿ | – | ಹೆಂಡತಿ, ಮಡದಿ, |
| ಪರಿಚಯ | – | ಗುರುತು |
| ಪಿಳ್ಳೆ ನೆಪ | – | ಚಿಕ್ಕ ಕಾರಣ |
| ಪೀಠ | – | ಆಸನ |
| ಪೇರಿಸು | – | ರಾಶಿಮಾಡು |
| ಪಂಚೆ | – | ಧೋತರ |
| ಪಂಡಿತ | – | ವಿದ್ವಾಂಸ |
| ಪಂಥ | – | ಪಂದ್ಯ |
| ಪ್ರಯಾಣ | – | ಸಂಚಾರ |
| ಬಿಮ್ಮನೆ | – | ವೇಗವಾಗಿ |
| ಮಹಿಷಬಂಧನ | – | ಕೋಣವನ್ನು ಕಟ್ಟುವ ಹಗ್ಗ |
| ಮರ್ಯಾದೆ | – | ಗೌರವ |
| ಮರಿಗೆ | – | ದೊಡ್ಡ ಪಾತ್ರೆ |
| ಮಿತಿಮೀರು | – | ಎಲ್ಲೆಮೀರು |
| ಮೊಗೆ | – | ತುಂಬಿಕೊಳ್ಳು, ಗೊರು, ತೋಡು |
| ಮೊಳ | – | ಮೊಳಕೈಯಿಂದ ಹಸ್ತದ ತುದಿಯವರೆಗಿನ ಅಳತೆ |
| ಮಂಡಿಸು | – | ಪ್ರತಿಪಾದಿಸು |
| ಯಥೋಚಿತ | – | ತಕ್ಕಂತಹ, ಅನುಗುಣವಾದ |
| ಲೀಲಾಜಾಲ | – | ಸುಲಭ |
| ವಸ್ತ್ರ | – | ಬಟ್ಟೆ |
| ವಾದ | – | ಚರ್ಚೆ |
| ವಾಡಿಕೆ | – | ಅಭ್ಯಾಸ, ಕ್ರಮ |
| ವಾರಿಧಿ | – | ಭೂಮಿ |
| ವಿಕಟಕವಿ | – | ಹಾಸ್ಯಕವಿ |
| ವಿನೋದ | – | ಹಾಸ್ಯ, ತಮಾಷೆ |
| ವಂಚಿಸು | – | ಮೋಸಮಾಡು |
| ಶರಣಾಗು | – | ಮೊರೆಹೋಗು |
| ಸರ್ತಿ | – | ಸಲ |
| ಸಮತಲ | – | ಸಮತಟ್ಟಾದ. |
| ಸವಾಲು | – | ಆಹ್ವಾನ, ಸ್ಪರ್ಧೆ |
| ಸಾಹಸಿ | – | ಶೂರ, ಪರಾಕ್ರಮಿ |
| ಸಿಡಿ | – | ಚಿಮ್ಮು, ಚೆಲ್ಲಾಪಿಲ್ಲಿಯಾಗು |
| ಸ್ವೀಕರಿಸು | – | ಅಂಗೀಕರಿಸು |
| ಸೊಕ್ಕು | – | ಗರ್ವ |
| ಸಿಂಹಾಸನ | – | ರಾಜನು ಸಭೆಯಲ್ಲಿ ಕುಳಿತುಕೊಳ್ಳುವ ಪೀಠ, ಗದ್ದುಗೆ |
| ಹೊತ್ತು | – | ಸಮಯ |
| ಹೊರೆ | – | ಕಟ್ಟು |

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಗಳಲ್ಲಿ ತೊಡಗುವುದು ಮತ್ತು ಆ ರಚನೆ ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ ಸಂಭಾಷಣೆಗಳ ಮೂಲಕ ಮಂಡಿಸುವುದು.
- ಪದಪ್ರಯೋಗ, ಭಾಷಾಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿ ರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳೊಂದಿಗೆ ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಓದಿದ, ಆಲಿಸಿದ ವ್ಯವಹಾರದ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

# 6. ನಾವು ಸಮಾನ

ನಾವೆಲ್ಲ ಭಾರತೀಯರು. ನಾವು ಸಮಾನರು. ಸ್ನೇಹ, ಸಹೋದರತೆಯಿಂದ, ಐಕ್ಯದಿಂದ ದುಡಿದು ಹಿರಿಯರ ಕನಸನ್ನು ನನಸಾಗಿಸಬೇಕು. ದುರ್ಬಲರಿಗೆ ಸಹಾಯಹಸ್ತವನ್ನು ಚಾಚಿ ನಮ್ಮೊಂದಿಗೆ ಕರೆದೊಯ್ಯಬೇಕು. ದುರಾಚಾರಗಳನ್ನು ನಿಲ್ಲಿಸಬೇಕು. ಹಾಗಾದರೆ ಮಾತ್ರ ಎಲ್ಲರಿಗೂ ಸುಖಜೀವನ, ನೆಮ್ಮದಿ ಲಭಿಸುತ್ತವೆ.



# ಎಲ್ಲಾ ಭೇದ ಮರೆತು

ಎಲ್ಲಾ ಭೇದ ಮರೆತು
ಬನ್ನಿರಿ ನಾವು ಸಮಾನ
ಸಾರುವ ಇಂದು ಎಲ್ಲರು ಒಂದು
ಇದುವೆ ನವಗಾನ
ದುಡಿದರು ಕಾಣುತ ಹಿರಿಯರು ಅಂದು
ಐಕ್ಯದ ಸುಂದರ ಕನಸು
ಪಣತೊಡಿರಿಂದು ಮಾಡುವೆವೆಂದು
ಎಲ್ಲವನು ನನಸು
ಜಾತಿ ಮತಗಳ ಧನಿಕ ಬಡವರ
ಭೇದವ ತರಬೇಡಿ
ಬಿದ್ದವರನು ಮೇಲೆತ್ತುವ ಬನ್ನಿ
ಎಲ್ಲರು ಕೈನೀಡಿ
ಗಂಗೆ ತುಂಗೆ ಕಾವೇರಿಯ ಜಲ
ನಮಗಾಗಿಯೆ ಎಂದೂ
ಮನಮಾಡಿಂದು ದುಡಿಯಲು ಬಂದು
ಆಲಸ ಬಿಡುತಿಂದು
ಪುಣ್ಯದ ಮಣ್ಣಿದು ಬೆಳೆಸಲು ಬಾ
ಬಂಗಾರದ ಬೆಳೆಯನ್ನು
ಬೆವರಿನ ಹೊಳೆಯೇ ಹರಿಯಲಿ ಇಂದು
ಕೊಚ್ಚುತ ಕೊಳೆಯನ್ನು
ಕೊಲೆ ಸುಲಿಗೆಗಳ ಅತ್ಯಾಚಾರದ
ಕೊನೆಯಾಗಲಿ ಇಂದು
ಸ್ನೇಹದ ಪ್ರೇಮದ ಭ್ರಾತೃತ್ವದ ಸೆಲೆ
ಹರಿಯಲಿ ಎಂದೆಂದು
ಕುಡಿಯುವುದೊಂದೇ ಜಲ
ಉಸಿರಾಡುವುದೊಂದೇ ಗಾಳಿ
ಹರಿಯುವುದೊಂದೇ ರಕ್ತವು
ನಮ್ಮಲಿ ಭೇದವು ಏಕಾಗಿ ॥



*ಡಾ. ನಾರಾಯಣ ಭಟ್*

## ಚಟುವಟಿಕೆಗಳು

### ಹಾಡುವ

- 'ಎಲ್ಲಾ ಭೇದ ಮರೆತು' ಪದ್ಯವನ್ನು ರಾಗವಾಗಿ ಹಾಡಿರಿ

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಹಿರಿಯರು ಕಂಡ ಕನಸು ಯಾವುದು?
2. ಈ ಪದ್ಯದಲ್ಲಿ ಸಮಾನತೆಯ ಕುರಿತು ಹೇಳಲಾದ ಸಾಲುಗಳು ಯಾವುವು?
3. ಈ ಪದ್ಯದಲ್ಲಿ ದುಡಿಮೆಯ ಕುರಿತು ಹೇಳಲಾದ ಸಾಲುಗಳು ಯಾವುವು?
4. ನಾವು ಯಾವ ಪಣ ತೊಡಬೇಕೆಂದು ಪದ್ಯದಲ್ಲಿ ಹೇಳಲಾಗಿದೆ?
5. ಯಾವುದು ಕೊನೆಗೊಳ್ಳಬೇಕೆಂದು ಕವಿ ಆಶಿಸುತ್ತಾರೆ?
6. ಎಂದೆಂದೂ ಹರಿಯಬೇಕಾದ ಸೆಲೆ ಯಾವುದು?

### ಸಮಾನಾರ್ಥ ಪದಗಳನ್ನು ಬರೆಯುವ

- ಅಡಿಗೆರೆ ಎಳೆದ ಪದಗಳ ಸಮಾನಾರ್ಥ ಪದಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.

ಒಂದು ಊರಿನಲ್ಲಿ ಒಬ್ಬ <u>ಶ್ರೀಮಂತ</u>ನಿದ್ದನು. ಅವನಿಗೆ ವಯಸ್ಸಾಯಿತು. ಅವನು ಒಂದು ದಿನ ತನ್ನ <u>ದೊಡ್ಡ</u> ಮಗನನ್ನು ಹತ್ತಿರ ಕರೆದು "ಮಗನೇ, ಇದು ನಮ್ಮ ಹಿರಿಯರ ಆಸ್ತಿ; ಇದರಲ್ಲಿ ಚೆನ್ನಾಗಿ ದುಡಿದರೆ <u>ಚಿನ್ನ</u>ದ ಬೆಳೆ ಬೆಳೆಸಬಹುದು ಎಂದು ಹೇಳಿದನು.

### ಪ್ರಾಸ ಪದಗಳನ್ನು ಬರೆಯುವ

- 'ಎಲ್ಲಾ ಭೇದ ಮರೆತು' ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಬರೆಯಿರಿ.

## ಆಶಯ ಬರೆಯುವ

- ಕೆಳಗೆ ನೀಡಲಾದ ವಾಕ್ಯಗಳನ್ನು ಓದಿರಿ. ಅವುಗಳಿಗೆ ಸಮಾನವಾದ ಆಶಯವಿರುವ ಸಾಲುಗಳನ್ನು ಪದ್ಯದಿಂದ ಆರಿಸಿ ಬರೆಯಿರಿ.
  - ಜಾತಿ–ಮತ, ಬಡವ–ಶ್ರೀಮಂತ ಎನ್ನುವ ಭೇದವನ್ನು ಮಾಡಬೇಡಿರಿ.
  - ಅಸಹಾಯಕರಿಗೆ ಸಹಾಯ ಮಾಡಲು ಮುಂದೆ ಬನ್ನಿರಿ. ಅದಕ್ಕಾಗಿ ಎಲ್ಲರೂ ಸಹಕರಿಸಿರಿ.

## ಆಸ್ವಾದನ ಟಿಪ್ಪಣಿ ಬರೆಯುವ

- ಎಲ್ಲಾ ಭೇದ ಮರೆತು ಪದ್ಯದ ಆಸ್ವಾದನ ಟಿಪ್ಪಣಿ ಬರೆಯಿರಿ.

## ಪರ್ಯಾಯ ಪದ ಬರೆಯುವ

- ಕೆಳಗೆ ಕೊಡಲಾದ ಪದಗಳ ಪರ್ಯಾಯ ಪದಗಳನ್ನು ಬರೆದು ವಾಕ್ಯರಚನೆ ಮಾಡಿರಿ

ಉದಾ : ಸಲಿಲ – ನೀರು. • ನಮಗೆ ಕುಡಿಯಲು ನೀರು ಬೇಕು.

- ಅನಿಲ –
- ಕನಕ –
- ಸಾಗರ –
- ನಕ್ಷತ್ರ –

## ವಿಂಗಡಿಸಿ ಬರೆಯುವ

- ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ
  - ಮಾಡುವೆನೆಂದು
  - ಮೇಲೆತ್ತುವ
  - ನಮಗಾಗಿಯೆ
  - ಕೊನೆಯಾಗಲಿ
  - ಕುಡಿಯುವುದೊಂದೆ

## ಇಷ್ಟವಾದ ಸಾಲು ಬರೆಯುವ

- ಪದ್ಯದಲ್ಲಿ ನಿಮಗೆ ಇಷ್ಟವಾದ ಸಾಲು ಯಾವುದು? ಯಾಕೆ? ಬರೆಯಿರಿ.

## ಸಾಲು ಸೇರಿಸುವ

- ಕೆಳಗೆ ಕೊಡಲಾದ ಪದ್ಯಕ್ಕೆ ಸಾಲು ಸೇರಿಸಿರಿ.

ಹಲವು ನದಿಗಳು ಹರಿಯುತಿರುವ
ದೇಶ ನಮ್ಮ ಭಾರತ
ಹಲವು ಪಂಥ ಮತಗಳಿರುವ
ದೇಶ ನಮ್ಮ ಭಾರತ

........................................

........................................

........................................

........................................

## ಟಿಪ್ಪಣಿ ಬರೆಯುವ

- ಕೆಳಗೆ ಕೊಡಲಾದ ಪದ್ಯಭಾಗ ನೀಡುವ ಸಂದೇಶವೇನು? ಟಿಪ್ಪಣಿ ಬರೆಯಿರಿ.

ಕೊಲೆ ಸುಲಿಗೆಗಳ ಅತ್ಯಾಚಾರದ
ಕೊನೆಯಾಗಲಿ ಇಂದೂ
ಸ್ನೇಹದ ಪ್ರೇಮದ ಭ್ರಾತೃತ್ವದ ಸೆಲೆ
ಹರಿಯಲಿ ಎಂದೆಂದೂ

## ಸಂಗ್ರಹಿಸುವ

- ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಾಡಿರಿ.

# ವೀರ ವೇಲುತಂಬಿ



ಭಾರತದ ಆಡಳಿತ ಆಂಗ್ಲರ ಕೈಯಲ್ಲಿತ್ತು. ದೇಶದ ಮೂಲೆ ಮೂಲೆಗಳಲ್ಲಿದ್ದ ರಾಜರು ಆಂಗ್ಲರು ಹೇಳಿದಂತೆ ಕೇಳಬೇಕಾಗಿತ್ತು. ಅವರ ಸ್ವಾತಂತ್ರ್ಯ, ಸಂಪತ್ತುಗಳನ್ನು ಏನಾದರೂ ಒಂದು ಕುಂಟು ನೆಪ ಒಡ್ಡಿ ಕಸಿದುಕೊಳ್ಳುವುದೆ ಆಂಗ್ಲ ಅಧಿಕಾರಿಗಳ ಗುರಿಯಾಗಿತ್ತು. ಇಂತಹ ದುರಾಡಳಿತ ಸಂದರ್ಭಗಳಲ್ಲೂ ಆಂಗ್ಲರ ವಿರುದ್ಧ ಹೋರಾಡಿ ತಮ್ಮ ಸ್ವಾಭಿಮಾನ, ಸಾಹಸ, ರಾಷ್ಟ್ರಪ್ರೇಮವನ್ನು ತೋರಿಸಿಕೊಟ್ಟು ಆಂಗ್ಲರನ್ನು ಆಶ್ಚರ್ಯಗೊಳಿಸಿದ ಅನೇಕ ಮಹಾತ್ಮರು ಇದ್ದಾರೆ. 'ವೇಲುತಂಬಿ' ಅಂತಹ ಮಹಾನುಭಾವರಲ್ಲಿ ಒಬ್ಬರು.

ಬಾಲರಾಮವರ್ಮ ತಿರುವಾಂಕೂರಿನ ರಾಜನಾಗಿದ್ದ. ವೇಲುತಂಬಿ ಆ ರಾಜ್ಯದ ಮುಖ್ಯಮಂತ್ರಿ. ಮಹಾಶೂರ, ಸ್ವಾಭಿಮಾನಿ. ರಾಜ ಎಲ್ಲಾ ಸಂದರ್ಭದಲ್ಲೂ ಈ ಮಂತ್ರಿಯ ಸಲಹೆಯಂತೆಯೆ ಆಡಳಿತ ನಿರ್ವಹಣೆ ಮಾಡುತ್ತಿದ್ದ.

'ನಿಮ್ಮ ಕಂದಾಯದ ಹಣವನ್ನು ಎರಡು ಪಟ್ಟು ಹೆಚ್ಚಿಸಲಾಗಿದೆ. ಕೂಡಲೇ ಸಲ್ಲಿಸುವುದು' ಎಂಬ ಆಜ್ಞೆಯು ಬ್ರಿಟಿಷರಿಂದ ರಾಜ ಬಾಲರಾಮವರ್ಮನಿಗೆ ಬಂದಿತು. ರಾಜ ಮಂತ್ರಿಗಳೊಡನೆ ಸಮಾಲೋಚನೆ ನಡೆಸಿದ. 'ಕೂಡದು, ಅಗತ್ಯವಿಲ್ಲ' ಎಂಬ ಸಲಹೆ ಮುಖ್ಯಮಂತ್ರಿಯಿಂದ ಬಂತು. ಬಾಲರಾಮವರ್ಮನ ಆಜ್ಞೆಯಂತೆ ವೇಲುತಂಬಿ ಮದ್ರಾಸಿನ ಗವರ್ನರರನ್ನು ಭೇಟಿಯಾದ. ಆ ಆಜ್ಞೆ ಅನ್ಯಾಯವೆಂದು ವಾದಿಸಿದ. ಗವರ್ನರ್ ಒಪ್ಪಲಿಲ್ಲ. ಮುಖ್ಯಮಂತ್ರಿ ಬರಿಗೈಯಿಂದ ಹಿಂತಿರುಗಿ ಬಂದ.

ಮುಂದೇನೆಂದು ಚರ್ಚಿಸಲು ರಾಜ ಸಭೆ ಏರ್ಪಡಿಸಿದ. 'ಅಪಮಾನ ಸಹಿಸುವುದೇ?' ಎಂಬ ಪ್ರಶ್ನೆ ಬಂತು. "ಕೂಡದು, ಪಾಠ ಕಲಿಸಬೇಕು"–ಹೀಗೆಂದು ವೇಲುತಂಬಿ ದೃಢವಾಗಿ ಹೇಳಿದ. ರಾಜನೂ ಅದಕ್ಕೆ ಒಪ್ಪಿದ. ಮುಂದಿನ ಹೆಜ್ಜೆ ಎಂದರೆ ಸಶಸ್ತ್ರ ಹೋರಾಟವೇ. ಆಂಗ್ಲರನ್ನು ಪ್ರತಿಭಟಿಸಿ ಯುದ್ಧ ಮಾಡಲು ಎಲ್ಲಾ ಸಿದ್ಧತೆಗಳು ನಡೆದವು.

ವೇಲುತಂಬಿಯ ನಾಯಕತ್ವದಲ್ಲಿ ಕೊಲ್ಲಂನ ಕಡೆಗೆ ಸೈನ್ಯ ಹೊರಟಿತು. ಬ್ರಿಟಿಷರ ಸೈನ್ಯದ ಚಿಕ್ಕಚಿಕ್ಕ ಗುಂಪುಗಳು ನಿರಪರಾಧಿ ಜನರ ಹತ್ಯೆಯಲ್ಲಿ ತೊಡಗಿದುವು. ಹಿಂಸಾಚಾರದಿಂದ ನೊಂದ ವೇಲುತಂಬಿ

ಆಲೋಚಿಸಿದ. ಅವನಿಗೆ ಒಂದು ಉಪಾಯ ಹೊಳೆಯಿತು. ಕೇವಲ ಸೈನಿಕರು ಯುದ್ಧ ಮಾಡಿದರೆ ಸಾಲದು. ಜನರನ್ನೆ ಬ್ರಿಟಿಷರ ವಿರುದ್ಧ ಎತ್ತಿ ಕಟ್ಟಬೇಕು ಎಂಬ ನಿರ್ಧಾರಕ್ಕೆ ಬಂದ. ಊರೂರುಗಳಲ್ಲಿ ಜನರ ಸಭೆ ಸೇರಿಸಿದ. ಪರಕೀಯರಾದ ಆಂಗ್ಲರನ್ನು ಭಾರತದಿಂದ ಹೊರದೂಡಲು ಕರೆ ನೀಡಿದ. 1809 ಜನವರಿ 16ರಂದು ಸೇರಿದ ಒಂದು ದೊಡ್ಡ ಸಭೆ ಅವನ ಕರೆಯನ್ನು ಒಪ್ಪಿತು. ಸಾವಿರಾರು ಜನ ಅವನ ಜೊತೆ ಸೇರಿದರು. ಅಂದಿನಿಂದ ಅದು ಜನತೆಯ ಹೋರಾಟವಾಯಿತು.

ಕೊಲ್ಲಂನಲ್ಲಿ ಮೂರು ದಿನಗಳ ನಂತರ ಕೇರಳದ ಜನತೆ ಬ್ರಿಟಿಷರ ವಿರುದ್ಧ ಸಾಮೂಹಿಕವಾಗಿ ಯುದ್ಧ ಹೂಡಿತು. ಲೆಕ್ಕವಿಲ್ಲದಷ್ಟು ಸಾವು ನೋವುಗಳಾದವು. ಜನರಿಗೆ ಸೋಲಾಯಿತು. ವೇಲುತಂಬಿ ಅಲ್ಲಿಂದ ತಪ್ಪಿಸಿಕೊಂಡ.

ಸ್ವಾಭಿಮಾನಿ ಮುಖ್ಯಮಂತ್ರಿ ಜನತೆಯ ಸೋಲನ್ನು ತನ್ನ ಸೋಲೆಂದೇ ತಿಳಿದ. ಮಹಾರಾಜನಿಗೆ ತನ್ನ ರಾಜೀನಾಮೆ ಪತ್ರ ಸಲ್ಲಿಸಿದ. ಆದರೆ "ಹೋರಾಟ ನಿಲ್ಲಿಸಲಾರೆ"ಎಂದೂ ಹೇಳಿಬಿಟ್ಟ. ವೇಲುತಂಬಿಯ ಸ್ವಾಭಿಮಾನದ ಗುಣ ತಿಳಿದಿದ್ದ ರಾಜ ಅವನ ಮಾತುಗಳನ್ನು ಒಪ್ಪಲೇಬೇಕಾಯಿತು.

ವೇಲುತಂಬಿ ಊರೂರು ಸುತ್ತಾಡಲು ಆರಂಭಿಸಿದ. ಆಂಗ್ಲರ ಅನ್ಯಾಯಗಳನ್ನು ಜನರಿಗೆ ತಿಳಿಸುತ್ತಾ ಅವರನ್ನು ಆಂಗ್ಲರ ವಿರುದ್ಧ ಬಡಿದೆಬ್ಬಿಸಿದ. ಬ್ರಿಟಿಷ್ ಸರಕಾರ ವೇಲುತಂಬಿಯ ಚಟುವಟಿಕೆಗಳನ್ನು ಕಂಡು ನಡುಗಿತು. ಈ ಸ್ವಾತಂತ್ರ್ಯಪ್ರೇಮಿ ವೀರನ ತಲೆಯನ್ನು ತಂದವರಿಗೆ 50,000 ರೂಪಾಯಿಗಳನ್ನು ಕೊಡುವುದಾಗಿ ಸಾರಿತು.

ಬ್ರಿಟಿಷ್ ಸೈನಿಕರು, ಗೂಢಚಾರರು ಗುಂಪು ಗುಂಪುಗಳಾಗಿ ಇಡೀ ಕೇರಳದ ಊರುಕೇರಿಗಳನ್ನು ಕಾಡು ಮೇಡುಗಳನ್ನು ಜಾಲಾಡಿದರು. ಆದರೂ ವೇಲುತಂಬಿಯ ಪತ್ತೆ ಆಗಲಿಲ್ಲ. ಕಡೆಗೊಮ್ಮೆ ಅವನು ಅಡಗಿಕೊಂಡಿದ್ದ ಮಣ್ಣಡಿ ಎಂಬಲ್ಲಿಗೆ ಬ್ರಿಟಿಷ್ ಸೈನ್ಯ ಧಾವಿಸಿತು. ಅವನು ವಾಸಿಸುತ್ತಿದ್ದ ಬಂಗಲೆಗೆ ಮುತ್ತಿಗೆ ಹಾಕಿತು. 'ಸೆರೆಸಿಕ್ಕಿ, ಬ್ರಿಟಿಷರ ಕೈಯಿಂದ ಶಿಕ್ಷೆ ಏಕೆ ಅನುಭವಿಸಬೇಕು? ಏನಾದರೂ ಸರಿ, ಜೀವಂತವಾಗಿ ಬ್ರಿಟಿಷರ ಕೈಗೆ ಸಿಗಬಾರದು' ಹೀಗೆಂದು ವೇಲುತಂಬಿ ನಿರ್ಧರಿಸಿದ.

ಬ್ರಿಟಿಷ್ ಸೈನ್ಯ ಮತ್ತು ವೇಲುತಂಬಿಯ ಸೈನ್ಯಗಳೊಳಗೆ ಹೋರಾಟ ಆರಂಭವಾಯಿತು. ಬಂಗಲೆಯ ಒಳಹೋಗುವುದು ಸುಲಭದ ಕೆಲಸವಾಗಿರಲಿಲ್ಲ. ನೂರಾರು ಬಿಳಿ ಸೈನಿಕರು ಸತ್ತು ಉರುಳಿದರು. ವೇಲುತಂಬಿಯ ಸೈನಿಕರೂ ಮರಣ ಹೊಂದಿದರು. ಕೊನೆಗೆ ಬ್ರಿಟಿಷ್ ಸೈನ್ಯ ವೇಲುತಂಬಿಯನ್ನು ಬಂಧಿಸಲು ಒಳಹೊಕ್ಕಿತು. ಆದರೆ ಅವರ ಕೈಗೆ ಸಿಕ್ಕಿದ್ದು ವೇಲುತಂಬಿಯ ನಿರ್ಜೀವ ದೇಹ ಮಾತ್ರ! ತನ್ನ ಖಡ್ಗದಿಂದ ಎದೆಗೆ ಇರಿದುಕೊಂಡು ಈ ಸ್ವಾಭಿಮಾನಿ ವೀರ ಪ್ರಾಣತ್ಯಾಗ ಮಾಡಿದ್ದ. ಬ್ರಿಟಿಷ್ ಸೈನಿಕರಿಗೆ ಈ ಸ್ವಾಭಿಮಾನ ಬಿಡಿಸಲಾರದ ಒಗಟಾಯಿತು. ಇಂದಿಗೂ ಉಳ್ಳೂರು ಎಂಬಲ್ಲಿ ವೇಲುತಂಬಿಯ ಸಮಾಧಿಯ ಮುಂದೆ ಜನರು ಸೇರಿ ಅವನ ಗುಣಗಾನ ಮಾಡುತ್ತಾರೆ. ಹೀಗೆ ವೇಲುತಂಬಿ ಕೇರಳದ ಜನಮಾನಸದಲ್ಲಿ ನಿತ್ಯ ಹಸಿರಾಗಿ ಬೆಳಗುತ್ತಿದ್ದಾನೆ.

## ಚಟುವಟಿಕೆಗಳು

### ಉತ್ತರಿಸುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

  1. ಬಾಲರಾಮವರ್ಮನ ಮುಖ್ಯಮಂತ್ರಿ ಯಾರು?
  2. ಬ್ರಿಟಿಷರು ಹೊರಡಿಸಿದ ಆಜ್ಞೆ ಯಾವುದು?
  3. ಬ್ರಿಟಿಷರ ಹಿಂಸಾಚಾರದಿಂದ ನೊಂದ ವೇಲುತಂಬಿ ಕೈಗೊಂಡ ನಿರ್ಧಾರವೇನು?
  4. ವೇಲುತಂಬಿ ರಾಜೀನಾಮೆ ನೀಡಲು ಕಾರಣವೇನು?

### ವಿರೋಧಾರ್ಥ ಪದ ಬರೆಯುವ

- ಅಡಿಗೆರೆ ಎಳೆದ ಪದಗಳ ವಿರೋಧಾರ್ಥ ಪದಗಳನ್ನು ಪಾಠದಿಂದ ಆರಿಸಿ ಬರೆಯಿರಿ.

  ಕುಮಾರ ತುಂಗನು <u>ಹೇಡಿಯಾದ</u> ಅರಸನಾಗಿದ್ದನು.

  ಪೋಲಿಸರು <u>ಅಪರಾಧಿಗೆ</u> ಶಿಕ್ಷೆ ನೀಡಿದರು.

  ಬ್ರಿಟಿಷರು ಯುದ್ಧರಂಗದಲ್ಲಿ <u>ಗೆದ್ದರು.</u>

  ಬ್ರಿಟಿಷರೊಡನೆ ಭಾರತೀಯರ ಯುದ್ಧ <u>ಅಂತ್ಯಗೊಂಡಿತು.</u>

  ಪೋಲೀಸರು ಹುಡುಕುತ್ತಿದ್ದ ಅಪರಾಧಿ <u>ನಾಪತ್ತೆಯಾದನು.</u>

### ಸಂಭಾಷಣೆ ಬರೆಯುವ

- ಪಾಠಭಾಗದಲ್ಲಿ ಬಂದಿರುವ ಕಥಾ ಪಾತ್ರಗಳನ್ನು ಗುರುತಿಸಿ ಸಂಭಾಷಣೆ ಬರೆಯಿರಿ.

### ಊಹಿಸಿ ಬರೆಯುವ

- ಕೆಳಗೆ ಕೊಟ್ಟ ಸನ್ನಿವೇಶವನ್ನು ಊಹಿಸಿ ಬರೆಯಿರಿ.

  - ವೇಲುತಂಬಿಯು ಬ್ರಿಟಿಷರ ಕೈಗೆ ಸಿಗದಿರುತ್ತಿದ್ದರೆ ಏನಾಗುತ್ತಿತ್ತು?

## ಅನುಕ್ರಮವಾಗಿ ಬರೆಯುವ


- ಪಾಠಭಾಗವನ್ನು ಓದಿ ಕೆಳಗೆ ಕೊಡಲಾದ ವಾಕ್ಯಗಳನ್ನು ಅನುಕ್ರಮವಾಗಿ ಬರೆಯಿರಿ.
  - ರಾಜ ಮಂತ್ರಿಗಳೊಡನೆ ಸಮಾಲೋಚನೆ ನಡೆಸಿದನು.
  - ವೇಲುತಂಬಿ ಊರೂರು ಸುತ್ತಾಡಲು ಆರಂಭಿಸಿದನು.
  - ವೇಲುತಂಬಿ ಕೇರಳದ ಜನಮಾನಸದಲ್ಲಿ ನಿತ್ಯ ಹಸಿರಾಗಿ ಬೆಳಗುತ್ತಿದ್ದಾನೆ.
  - ಪರಕೀಯರಾದ ಆಂಗ್ಲರನ್ನು ಭಾರತದಿಂದ ಹೊರದೂಡಲು ಕರೆ ನೀಡಿದನು.
  - ಏನಾದರೂ ಸರಿ, ಜೀವಂತವಾಗಿ ಬ್ರಿಟಿಷರ ಕೈಗೆ ಸಿಗಬಾರದು.

## ವಾಕ್ಯ ರಚಿಸುವ

- ಕೆಳಗೆ ನೀಡಲಾದ ಪದಗಳನ್ನು ಸರಿಯಾಗಿ ಬರೆದು ವಾಕ್ಯರಚಿಸಿರಿ. ಆ ವಾಕ್ಯ ಪಾಠಭಾಗದಲ್ಲಿ ಎಲ್ಲಿದೆ ಎಂದು ಕಂಡುಹಿಡಿಯಿರಿ.

  1. ಗುಣಗಾನ/ಸೇರಿ/ಮುಂದೆ/ಸಮಾಧಿಯ/ಮಾಡುತ್ತಾರೆ/ಜನರು/ಅವನ
  2. ಊರೂರು/ವೇಲುತಂಬಿ/ಆರಂಭಿಸಿದ/ಸುತ್ತಾಡಲು
  3. ಕರೆ/ಆಂಗ್ಲರನ್ನು/ಹೊರದೂಡಲು/ನೀಡಿದ/ಭಾರತದಿಂದ
  4. ಹಾಕಿತು/ವಾಸಿಸುತ್ತಿದ್ದ/ಮುತ್ತಿಗೆ/ಅವನು/ಬಂಗಲೆಗೆ
  5. ರಾಜ/ಸಮಾಲೋಚನೆ/ಮಂತ್ರಿ/ನಡೆಸಿದ

# ಖಾನ್ ಅಬ್ದುಲ್ ಗಫಾರ್‌ಖಾನ್



ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳು ಕೂಡಿದ್ದ ಅಖಂಡ ಭಾರತವನ್ನು ಸದಾ ಕಾಪಾಡಬೇಕೆಂದು ಬಯಸಿದ್ದ ಖಾನ್ ಅಬ್ದುಲ್ ಗಫಾರ್ ಖಾನರು 1890 ಫೆಬ್ರವರಿ 6ರಂದು ಪಂಜಾಬಿನಲ್ಲಿ ಜನಿಸಿದರು. ಇವರ ಇನ್ನೊಂದು ಹೆಸರು ಬಾದಷಾಹ ಖಾನ್. ದುಃಖಿತರನ್ನೂ ಬಡವರನ್ನೂ ಪ್ರೀತಿಸುತ್ತಿದ್ದ ತಂದೆ ಬಹರಾಮ್ ಖಾನರ ಪ್ರೀತಿಯಲ್ಲೇ ಬಾಲ್ಯ ಕಳೆದು ಹುಟ್ಟೂರಲ್ಲಿ ಪ್ರೌಢ ಶಾಲಾ ವಿದ್ಯಾಭ್ಯಾಸ ಮಾಡಿದರು. ಸೇನೆ ಸೇರಲು ಇಚ್ಛಿಸಿದರೂ ತಂದೆ ಸಮ್ಮತಿಸಲಿಲ್ಲ. ದೇಶಸೇವೆ ಮಾಡಲು ಇವರು ಸ್ವಾತಂತ್ರ್ಯ ಚಳುವಳಿಯಿಂದ ಪ್ರೇರಣೆ ಪಡೆದರು.

1912ರಲ್ಲಿ ಪಠಾಣ ಹುಡುಗಿಯನ್ನು ವಿವಾಹವಾದರು. ಖಾನರು ಮೌಲಾನಾ ಅಬ್ದುಲ್ ಕಲಾಂ ಆಜಾದರ 'ಆಲ್‌ಹಿಲಾಲ್' ಪತ್ರಿಕೆಯಿಂದ ಸ್ಫೂರ್ತಿಗೊಂಡರು. ಲಕ್ನೋದಲ್ಲಿ ಮಹಾತ್ಮಾಗಾಂಧೀಜಿ, ಜವಹರಲಾಲ ನೆಹರೂ ಮುಂತಾದ ನಾಯಕರುಗಳನ್ನು ಭೇಟಿಯಾಗಿ ಹಿಂದೂ ಮುಸ್ಲಿಂ ಭಾವೈಕ್ಯದ ಕುರಿತು ಚರ್ಚಿಸಿದರು. ಗಾಂಧಿ ತತ್ವ ಪರಿಪಾಲಿಸುತ್ತ ದೇಶದ ಏಳಿಗೆಗಾಗಿ ಸದಾ ಜಾಗೃತಿ ಮೂಡಿಸುತ್ತಿದ್ದ ಖಾನ್‌ರನ್ನು ಜನರು ಪ್ರೀತಿಯಿಂದ 'ಗಡಿನಾಡ ಗಾಂಧಿ' ಎಂದು ಕರೆದರು.

1929ರಲ್ಲಿ ಗಡಿನಾಡ ಗಾಂಧಿಗೆ 'ಫಕೀರ್ ಇ ಅಫ್‌ಘಾನ್' ಎಂಬ ಬಿರುದು ದೊರೆಯಿತು. ಬ್ರಿಟಿಷರ ವಿರುದ್ಧ ಖಿಲಾಫತ್ ಚಳವಳಿಯಲ್ಲಿ ಪಾಲ್ಗೊಂಡರು. ಇದಕ್ಕಾಗಿ ಅವರಿಗೆ ಮೂರುವರ್ಷ ಜೈಲುಶಿಕ್ಷೆ ವಿಧಿಸಲಾಯಿತು. ರಾಷ್ಟ್ರೀಯ ಭಾವೈಕ್ಯದಲ್ಲಿ ನಂಬಿಕೆ ಇರಿಸಿದ್ದ ಗಡಿನಾಡ ಗಾಂಧಿಯವರು ಕುರಾನ್, ಬೈಬಲ್ ಹಾಗೂ ಭಗವದ್ಗೀತೆಗಳನ್ನು ಕಾರಾಗೃಹದಲ್ಲಿ ಅಧ್ಯಯನ ಮಾಡಿದರು. ಖಾನ್‌ರನ್ನು ಬಿಡುಗಡೆ ಮಾಡಿಸಲು ವೈಸರಾಯರ ಮನವೊಲಿಸಲು ಗಾಂಧೀಜಿಯವರು ವಿಫಲರಾದರು. ಅನಂತರ ಅವರನ್ನು ಬಿಡುಗಡೆಗೊಳಿಸಲಾಯಿತು.

ಅಖಂಡ ಭಾರತ ದೇಶ ವಿಭಜನೆಯಾದಾಗ ತೀವ್ರವಾಗಿ ನೊಂದುಕೊಂಡರು. ಹಿಂದೂ ಮುಸ್ಲಿಂ ಭಾವೈಕ್ಯಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟರು. ಸರ್ವಾಧಿಕಾರವನ್ನು ವಿರೋಧಿಸಿ ಶಾಂತಿಯುತ ಹೋರಾಟ ನಡೆಸಿದ್ದ ಖಾನರು ಕಾಬೂಲಿಗೆ ಹೋಗಿ ನೆಲೆಸಿದರು. 1969ರಲ್ಲಿ ಮಹಾತ್ಮಾ ಗಾಂಧೀಜಿಯವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಗಡಿನಾಡ ಗಾಂಧಿ ಖಾನ್‌ರನ್ನು 'ನೆಹರೂ ಅಂತಾರಾಷ್ಟ್ರೀಯ ಶಾಂತಿ ಪುರಸ್ಕಾರ' ನೀಡಿ ಗೌರವಿಸಲಾಯಿತು. 1987ರಲ್ಲಿ ಭಾರತ ಸರಕಾರವು "ಭಾರತ ರತ್ನ" ಪ್ರಶಸ್ತಿ ನೀಡಿ ಗೌರವಿಸಿತು. ಗಡಿನಾಡ ಗಾಂಧಿ ಎಂದು ಜನಪ್ರೀತಿಗೆ ಪಾತ್ರರಾದ ಖಾನ್ ಅಬ್ದುಲ್ ಗಫಾರ ಖಾನ್‌ರು 1988ರ ಜನವರಿ 20ರಂದು ನಿಧನರಾದರು.

## ಚಟುವಟಿಕೆಗಳು

### ಘಟನೆಗಳನ್ನು ಬರೆಯುವ

- ಪಾಠವನ್ನು ಓದಿ ಗಫಾರ್‌ಖಾನರ ಜೀವನದ ಘಟನೆಗಳನ್ನು ಅನುಕ್ರಮವಾಗಿ ಬರೆಯಿರಿ.
  - ಗಫಾರ್‌ಖಾನರು 1890ರಲ್ಲಿ ಜನಿಸಿದರು.
  -
  -

### ಪ್ರಶ್ನೆ ತಯಾರಿಸುವ

- ಪಾಠವನ್ನು ಓದಿ ಸೂಕ್ತವಾದ ಪ್ರಶ್ನೆಗಳನ್ನು ತಯಾರಿಸಿರಿ.

### ಸರಿಯಾದ ಪದ ಬರೆಯುವ

- ಕೆಳಗೆ ಕೊಡಲಾದ ಪದಗಳಿಂದ ಸರಿಯಾದ ಪದಗಳನ್ನು ಆರಿಸಿ ಬರೆಯಿರಿ
  - ಶತಮಾನೋತ್ಸವ, ಶಾತಮಾನೋತ್ಸವ, ಶತಾಮಾನೋತ್ಸವ
  - ಅಂತಾರರಾಷ್ಟ್ರೀಯ, ಅಂತಾರಾಷ್ಟ್ರೀಯ, ಅಂತರ್ರಾಷ್ಟ್ರೀಯ
  - ಸ್ವಾಸಂತ್ರ್ಯ, ಸ್ವಾತಂತ್ರ್ಯ, ಸ್ವಾತ್ರಂತ್ಯ
  - ಸರ್ವಾದಿಕಾರ, ಸವಾರ್ಧಿಕಾರ, ಸರ್ವಾಧಿಕಾರ

### ಬದಲಾಯಿಸಿ ಬರೆಯುವ

- ಅಡಿಗೆರೆ ಎಳೆದ ಪದಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಿರಿ.

ಮಾದರಿ : ರಹೀಮನು ಶಾಲಾ ವಿದ್ಯಾರ್ಥಿ ನಾಯಕನಾಗಿದ್ದನು.

ಗಿರಿಜಳು ಶಾಲಾ ವಿದ್ಯಾರ್ಥಿ ನಾಯಕಿಯಾಗಿದ್ದಳು.

1. ಬಾಲಕನು ವೇಗವಾಗಿ ಓಡಿದನು.
2. ವಿದ್ಯಾರ್ಥಿಗಳು ತರಗತಿಯಲ್ಲಿ ಗಲಾಟೆ ಮಾಡಿದರು.
3. ಅರಸನು ಆಜ್ಞೆ ಮಾಡಿದನು.

## ವ್ಯಕ್ತಿ ಪರಿಚಯ ಬರೆಯುವ

- ಕೆಳಗೆ ನೀಡಲಾದ ಮಾಹಿತಿಗಳ ಆಧಾರದಲ್ಲಿ ಸರೋಜಿನಿ ನಾಯ್ಡುರವರ ವ್ಯಕ್ತಿಪರಿಚಯ ಬರೆಯಿರಿ.



| | | |
|---|---|---|
| ಜನನ | : | 1879 ಫೆಬ್ರವರಿ 13 ಹೈದರಾಬಾದ್ |
| ತಂದೆ ತಾಯಿ | : | ಅಘೋರನಾಥ, ವರಸುಂದರಿ |
| ಆಸಕ್ತಿ | : | ಸಾಹಿತ್ಯ |
| ಪತಿ | : | ಗೋವಿಂದರಾಜುಲು ನಾಯ್ಡು |
| ಕ್ಷೇತ್ರ | : | ಸ್ವಾತಂತ್ರ್ಯ ಹೋರಾಟ |
| ಬಿರುದು | : | ಭಾರತದ ಕೋಗಿಲೆ |
| ನಿಧನ | : | 1949 |

## ಓದಿರಿ


- ಭಾರತದ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಯನ್ನು ಓದಿರಿ.

## ಅರ್ಥಕೋಶ

| | | |
|---|---|---|
| ಅಖಂಡ | – | ಇಡಿಯಾದ |
| ಆಲಸ | – | ಸೋಮಾರಿ |
| ಆಲಸ್ಯ | – | ಸೋಮಾರಿತನ |
| ಇಚ್ಛಿಸು | – | ಆಸೆಪಡು, ಅಪೇಕ್ಷಿಸು |
| ಎತ್ತಿಕಟ್ಟು | – | ಒಟ್ಟುಸೇರಿಸು, ಹುರಿದುಂಬಿಸು |
| ಏಳಿಗೆ | – | ಬೆಳವಣಿಗೆ, ಅಭಿವೃದ್ಧಿ |
| ಐಕ್ಯ | – | ಒಗ್ಗಟ್ಟು |
| ಒಪ್ಪಂದ | – | ಸಮ್ಮತಿ, ಒಪ್ಪಿಗೆ, ಕರಾರು |
| ಕರೆ | – | ಆಹ್ವಾನ, ಆಮಂತ್ರಣ |
| ಕಾರಾಗೃಹ | – | ಜೈಲು, ಸೆರೆಮನೆ |
| ಕೊಳೆ | – | ಕೆಸರು, ಮಾಲಿನ್ಯ |
| ಗೌರವ | – | ಮರ್ಯಾದೆ |
| ಜನಿಸು | – | ಹುಟ್ಟು |
| ಜಾಲಾಡು | – | ಹುಡುಕು |
| ಜನ್ಮಶತಮಾನೋತ್ಸವ | – | ನೂರನೇ ವರ್ಷದ ಹುಟ್ಟುಹಬ್ಬ |
| ಜಾಗೃತಿ | – | ಎಚ್ಚರ |
| ತತ್ವ | – | ಸಿದ್ಧಾಂತ |
| ತೀವ್ರ | – | ಹರಿತ, ರಭಸ |
| ದೀರ್ಘ | – | ಹೆಚ್ಚು ಸಮಯ, ಉದ್ದವಾದ |
| ದುಡಿಯು | – | ಕೆಲಸಮಾಡು |
| ನವ ಗಾನ | – | ಹೊಸ ಹಾಡು |
| ನಿಧನ | – | ಮರಣ |
| ನಂಬಿಕೆ | – | ವಿಶ್ವಾಸ |
| ಪಣ | – | ಪ್ರತಿಜ್ಞೆ |
| ಪರಿಪಾಲಿಸು | – | ಕಾಪಾಡು |
| ಪಾತ್ರ | – | ಅರ್ಹ,ಯೋಗ್ಯ |
| ಪಾಲ್ಗೊಳ್ಳು | – | ಭಾಗವಹಿಸು |
| ಬಿಡುಗಡೆ | – | ಮುಕ್ತಿ |
| ಬಿರುದು | – | ಪ್ರಶಸ್ತಿ |
| ಬಂಗಾರ | – | ಚಿನ್ನ |
| ಮನ | – | ಮನಸ್ಸು |
| ವಿಫಲ | – | ಫಲವಿಲ್ಲದ, ನಿರರ್ಥಕ |
| ಸಾಹಸ | – | ಪರಾಕ್ರಮ |
| ಸುಲಿಗೆ | – | ದೋಚು, ಕೊಳ್ಳೆಹೊಡೆ |
| ಸೆಲೆ | – | ಒಸರು, ಜಿನುಗು |
| ಶೂರ | – | ಪರಾಕ್ರಮಿ, ವೀರ |
| ಹತ್ಯೆ | – | ಕೊಲೆ |

# ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯವನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಯಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಪದಪ್ರಯೋಗ, ಭಾಷಾಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಾಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರದ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಮದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.



# 7. ಹೋಗೋಣ ಬಾರಾ

‘ದೇಶ ಸುತ್ತಿನೋಡು, ಕೋಶ ಓದಿನೋಡು’ ಎಂಬ ಮಾತಿದೆ. ಇದು ಪ್ರವಾಸದ ಹಿರಿಮೆಯನ್ನು ಸಾರುತ್ತದೆ. ಅನಾದಿ ಕಾಲದಿಂದಲೇ ನಮ್ಮ ಜನ ಒಂದೂರಿನಿಂದ ಇನ್ನೊಂದು ಊರಿಗೆ ಸಂಚಾರ ಮಾಡುತ್ತಲೇ ಇದ್ದಾರೆ. ತೀರ್ಥಯಾತ್ರೆ, ಉಲ್ಲಾಸಯಾತ್ರೆ, ಉದ್ಯೋಗ, ಪ್ರವಾಸ, ವಾಸಸ್ಥಳದ ಬದಲಾವಣೆ ಹೀಗೆ ಕಾರಣಗಳು ಹಲವಾರು. ಪ್ರಯಾಣವು ನಮಗೆ ಆನಂದವನ್ನು ನೀಡುತ್ತದೆ. ನಮ್ಮ ನಡೆನುಡಿಗಳನ್ನು ತಿದ್ದಿ ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಬೇರೆಬೇರೆ ಪ್ರದೇಶಗಳ ಬದುಕಿನ ಚಿತ್ರಣ ನಮಗೆ ಅಪಾರವಾದ ಜೀವನಾನುಭಗಳನ್ನು ನೀಡುತ್ತದೆ.

# ನಾವಿಕ ಸಿಂದಬಾದ್

ಬಾಗ್ದಾದ್ ಎಂಬ ಪಟ್ಟಣದಲ್ಲಿ ಸಿಂದಬಾದ್ ಎಂಬ ನಾವಿಕನಿದ್ದನು. ಒಂದು ದಿನ ಅವನು ತನ್ನ ಜೊತೆಗಾರರೊಂದಿಗೆ ಹಡಗಿನಲ್ಲಿ ಪಯಣ ಹೊರಟನು. ಸಮುದ್ರದಲ್ಲಿ ಬಿರುಗಾಳಿಗೆ ಸಿಕ್ಕಿದ ಹಡಗು ನುಚ್ಚುನೂರಾಯಿತು. ಹಡಗಿನಲ್ಲಿದ್ದವರೆಲ್ಲ ನೀರುಪಾಲಾದರು. ಆದರೆ ಸಿಂದಬಾದನೊಬ್ಬನೇ ಸಮುದ್ರದ ದಡದ ಮರಳ ರಾಶಿಗೆ ಎಸೆಯಲ್ಪಟ್ಟನು. ಅದೊಂದು ಅಪರಿಚಿತವಾದ ದ್ವೀಪವಾಗಿತ್ತು. ಆ ದ್ವೀಪವನ್ನು ಪರೀಕ್ಷಿಸಲೆಂದು ಸಿಂದಬಾದ್ ಪಕ್ಕದಲ್ಲಿ ಬೆಳೆದು ನಿಂತಿದ್ದ ಎತ್ತರವಾದ ಮರವೊಂದನ್ನು ಹತ್ತಿ ನೋಡಿದನು. ದೂರದಲ್ಲಿ ಬೆಳ್ಳಗೆ ಗುಂಡಗಿನ ದೊಡ್ಡ ಆಕೃತಿಯನ್ನು ಕಂಡನು. ಅದೇನೆಂದು ತಿಳಿಯುವ ಕುತೂಹಲದಿಂದ ಸಿಂದಬಾದ್ ಅದರ ಬಳಿಗೆ ಹೋದನು. ಅಷ್ಟರಲ್ಲಿ ಆಕಾಶದಲ್ಲಿ ಕತ್ತಲೆ ಮುಸುಕಿದ ಹಾಗೆ ಅನಿಸಿತು. ಸಿಂದಬಾದ್ ದಿಟ್ಟಿಸಿ ನೋಡಿದಾಗ ಭಾರೀ ಪಕ್ಷಿಯೊಂದು ಹಾರಿ ಬಂದು ಬೆಳ್ಳಗಿನ ಆಕೃತಿಯ ಮೇಲೆ ಕುಳಿತುಕೊಂಡಿತು. ಆಗ ಅವನಿಗೆ ಆ ಹಕ್ಕಿ ರಾಕ್ ಹಕ್ಕಿಯೆಂದೂ ಬೆಳ್ಳಗಿನ ವಸ್ತು ಅದರ ಮೊಟ್ಟೆಯೆಂದೂ ತಿಳಿಯಿತು.



ಆ ದ್ವೀಪದಿಂದ ತಾನು ತಪ್ಪಿಸಿಕೊಳ್ಳುವ ಬಗೆ ಹೇಗೆ? ಎಂದು ಅವನು ಯೋಚಿಸಿದನು. ಅವನು ರಾಕ್ ಪಕ್ಷಿಯ ಕಾಲಿಗೆ ತನ್ನನ್ನು ಕಟ್ಟಿಕೊಂಡನು. ಮರುದಿನ ಬೆಳಗ್ಗೆ ಪಕ್ಷಿ ಹಾರಿತು. ಅದರೊಂದಿಗೆ ಸಿಂದಬಾದನೂ ಹಾರಿದನು. ಕಣಿವೆ, ಬೆಟ್ಟ, ಪರ್ವತಗಳು ಇವುಗಳ ಮೇಲೆ ಹಕ್ಕಿ ಹಾರಾಡಿ ಕಡೆಗೆ ಮುತ್ತುರತ್ನಗಳ ಕಣಿವೆಯೊಳಗೆ ಇಳಿಯಿತು. ಅಲ್ಲಿ ಬಿದ್ದಿದ್ದ ದಪ್ಪಗಿನ ಹಾವೊಂದನ್ನು ಅದು ಕಚ್ಚಿ ತಿನ್ನುತ್ತಿದ್ದಾಗ, ಸಿಂದಬಾದ ಅದರ ಕಾಲಿನಿಂದ ತನ್ನನ್ನು ಬಿಡಿಸಿಕೊಂಡನು. ತನ್ನ

ಊಟ ಮುಗಿದೊಡನೆ ಪಕ್ಷಿ ಹಾರಿಹೋಯಿತು.

ಸಿಂದಬಾದನಿಗೆ ಆ ಸ್ಥಳದಲ್ಲಿ ಉಳಿಯಲೂ ಹೆದರಿಕೆ. ಯಾಕೆಂದರೆ ಆ ಕಣಿವೆಯು ತುಂಬಾ ಮುತ್ತುರತ್ನಗಳು ಚೆಲ್ಲಿಬಿದ್ದಿದ್ದರೂ ಭಯಂಕರವಾದ ಹಾವುಗಳಿದ್ದವು. ಅವು ಹಗಲು ವೇಳೆ ರಾಕ್ ಪಕ್ಷಿಯ ಹೆದರಿಕೆಯಿಂದ ಒಳಗೆ ಅಡಗಿ ರಾತ್ರಿಯ ಹೊತ್ತು ಹೊರಬರುತ್ತಿದ್ದವು.



ಸಿಂದಬಾದ್ ಸಣ್ಣ ಗುಹೆಯೊಂದನ್ನು ಹುಡುಕಿ ಅದರ ಬಾಗಿಲನ್ನು ಬಂಡೆಯಿಂದ ಮುಚ್ಚಿ ರಾತ್ರಿಯನ್ನು ಕಳೆದನು. ಬೆಳಗಾದ ಮೇಲೆ ಅವನು ಹೊರಬಂದಾಗ ಮೇಲಿನಿಂದ ಮಾಂಸದ ಚೂರುಗಳು ಕಣಿವೆಯೊಳಗೆ ಬೀಳುವುದನ್ನು ಕಂಡನು. ಆಗ ಅವನಿಗೆ ನಾವಿಕರು ಹೇಳುತ್ತಿದ್ದ ಕತೆಗಳ ನೆನಪಾಯಿತು. ವರ್ತಕರು ಮುತ್ತುರತ್ನಗಳ ಆಶೆಗಾಗಿ ಮಾಂಸದ ತುಣುಕುಗಳನ್ನು ಎಸೆಯುವರೆಂದೂ ಹದ್ದುಗಳು ಅವನ್ನು ಕಚ್ಚಿಕೊಂಡು ಮೇಲೆ ಹಾರಿ ತಮ್ಮ ಗೂಡುಗಳಿಗೆ ಹೋದಾಗ ಹದ್ದುಗಳನ್ನು ಹೆದರಿಸಿ, ಓಡಿಸಿ ಮಾಂಸಕ್ಕೆ ಅಂಟಿಕೊಂಡಿದ್ದ ಮುತ್ತುರತ್ನಗಳನ್ನು ತೆಗೆದುಕೊಳ್ಳುವರೆಂದೂ ಅವನು ಕೇಳಿದ್ದನು.

ಸಿಂದಬಾದ್ ಆ ಭಯಂಕರ ತಾಣದಿಂದ ತಪ್ಪಿಸಿಕೊಳ್ಳಲು ಒಂದು ಉಪಾಯ ಹೂಡಿದನು. ಒಂದು ಬಟ್ಟೆಯ ತುಂಬಾ ಮುತ್ತುರತ್ನಗಳನ್ನು ಕಟ್ಟಿಕೊಂಡನು. ತನ್ನ ಬೆನ್ನಿಗೆ ನಾಲ್ಕಾರು ಮಾಂಸದ ತುಣುಕುಗಳನ್ನು ಅಂಟಿಸಿಕೊಂಡು ಮಲಗಿದನು. ಭಾರೀ ಹದ್ದೊಂದು ಅವನನ್ನು ಎತ್ತಿಕೊಂಡು ಪರ್ವತದ ಮೇಲಕ್ಕೆ ಒಯ್ದಿತು. ಅಲ್ಲಿ ವರ್ತಕರು ಗಲಾಟೆಮಾಡಿ ಹದ್ದನ್ನು ಓಡಿಸಿದರು.

ಸಿಂದಬಾದನನ್ನು ಕಂಡು ಅವರಿಗೆ ಆಶ್ಚರ್ಯವೋ ಆಶ್ಚರ್ಯ. ಸಿಂದಬಾದ್ ಅವರಿಗೆ ತನ್ನ ಕತೆಯನ್ನೆಲ್ಲಾ ಹೇಳಿದನು. ತಾನು ತಂದಿದ್ದುದರಲ್ಲಿ ಅವರಿಗೂ ನಾಲ್ಕಾರು ರತ್ನಗಳನ್ನು ಕೊಟ್ಟು ತನ್ನೂರಿಗೆ ಮರಳಿದನು.

## ಚಟುವಟಿಕೆಗಳು

### ಅರ್ಥವನ್ನು ಬರೆಯುವ

- ಕೆಳಗೆ ಕೊಟ್ಟ ಪಾಠಾವನ್ನು ಓದಿರಿ. ಅಡಿಗೆರೆ ಎಳೆದ ಪದಗಳ ಅರ್ಥವನ್ನು ಪಾಠದಿಂದ ಆರಿಸಿ ಬರೆಯಿರಿ.

  ನಗರ ಸಮೀಪದ ಒಂದು ಹಳ್ಳಿ. ಅಲ್ಲಿ ಒಂದು ನದಿ. ಸಂಜೆಯ ಹೊತ್ತು ನದಿಯಲ್ಲಿ ವಿಶಾಲವಾದ ಹೊಯ್ಗೆರಾಶಿಯ ಮೇಲೆ ಓಡಾಡಿ ಮಕ್ಕಳು ಗಾಳಿಪಟ ಹಾರಿಸುತ್ತಿದ್ದರು. ಅಷ್ಟರಲ್ಲಿ ಜೋರಾಗಿ ಗಾಳಿ ಬೀಸಿತು. ಮಕ್ಕಳಿಗೆ ತುಂಬಾ ಭಯವಾಯಿತು. ನಿಖಿಲ ಎಂಬ ಬಾಲಕನ ಬೃಹದಾಕಾರದ ಗಾಳಿಪಟ ಗಾಳಿಯ ರಭಸಕ್ಕೆ ಸಿಕ್ಕಿ ಛಿದ್ರಛಿದ್ರವಾಯಿತು. ಬಿರುಗಾಳಿಯು ಪಟದ ಚೂರುಗಳನ್ನು ದೂರ ಕೊಂಡುಹೋಯಿತು. ಕೊನೆಗೆ ಅವುಗಳು ದೊಡ್ಡದಾದ ವೃಕ್ಷವೊಂದರಲ್ಲಿ ಸಿಲುಕಿದವು. ತುಂಟನಾದ ನಿಖಿಲನು ಮರವನ್ನು ಹತ್ತಿ ಹರಿದ ಚೂರುಗಳನ್ನು ತೆಗೆಯಲು ಪ್ರಯತ್ನ ಮಾಡಿದನು. ಸಿಗದಿದ್ದಾಗ ನಿರಾಸೆಯಿಂದ ಮನೆಗೆ ಹಿಂದಿರುಗಿದನು.

### ಪದ ಬರೆಯುವ

- ಆವರಣದಿಂದ ಯೋಗ್ಯವಾದ ಪದಗಳನ್ನು ಆರಿಸಿ ಹೊಂದಿಸಿರಿ.

  (ವರ್ತಕರು, ಕಣಿವೆ, ನಾವಿಕ, ಗುಹೆ, ದ್ವೀಪ)

  ಅ) ನೌಕೆಯನ್ನು ನಡೆಸುವವ

  ಆ) ಸುತ್ತಲೂ ನೀರು ಆವರಿಸಿದ ಭೂಭಾಗ

  ಇ) ಬೆಟ್ಟದ ನಡುವಿನ ತಗ್ಗಾದ ಪ್ರದೇಶ

  ಈ) ವ್ಯಾಪಾರ ಮಾಡುವವರು

  ಉ) ಕಾಡಿನಲ್ಲಿ ಹುಲಿಸಿಂಹಗಳ ವಾಸಸ್ಥಳ.

### ಗುರುತಿಸುವ

- ಕೆಳಗೆ ಕೊಟ್ಟಿರುವ ಆಶಯವನ್ನು ಕೊಡುವ ವಾಕ್ಯಗಳನ್ನು 'ಸಿಂದಬಾದ್ ನಾವಿಕ' ಪಾಠದಲ್ಲಿ ಗುರುತಿಸಿರಿ.

  ಅ) ದ್ವೀಪದಿಂದ ಪಾರಾದ ಬಗೆ

  ಆ) ದ್ವೀಪ ನಿರೀಕ್ಷಣೆ

  ಇ) ಹಡಗಿನ ಅನಾಹುತ

ಈ) ಕಣಿವೆಯ ದೃಶ್ಯ

ಉ) ಸಿಂದಬಾದ್ ಮುತ್ತುರತ್ನಗಳನ್ನು ತಂದ ರೀತಿ

ಊ) ಊರನ್ನು ಸೇರುವುದು

## ಪ್ರಶ್ನೆ ತಯಾರಿಸುವ

- ನಾವಿಕ ಸಿಂದಾಬಾದ್ ಪಾಠದ ಪ್ರಧಾನ ಆಶಯ ಉತ್ತರವಾಗಿ ಬರುವ ಪ್ರಶ್ನೆಗಳನ್ನು ತಯಾರಿಸಿರಿ.

  ಉದಾ: ಸಿಂದಬಾದನ ಪ್ರಯಾಣದ ಸಂದರ್ಭದಲ್ಲಿ ಏನು ಸಂಭವಿಸಿತು?

## ಹೊಂದಿಸುವ

- 'ಕ' ವಿಭಾಗದ ಪದಗಳೊಂದಿಗೆ 'ಖ' ವಿಭಾಗದ ಪದಗಳನ್ನು ಪಾಠದ ಆಧಾರದಲ್ಲಿ ಹೊಂದಿಸಿರಿ. ಅವುಗಳೊಳಗಿನ ಸಂಬಂಧವೇನು ಹೇಳಿರಿ.

| ಕ | ಖ |
|---|---|
| ಸಣ್ಣ | ಆಕೃತಿ |
| ಎತ್ತರವಾದ | ದ್ವೀಪ |
| ಭಯಂಕರ | ಪಕ್ಷಿ |
| ಅಪರಿಚಿತ | ಹಾವು |
| ಭಾರೀ | ಗುಹೆ |
| ಗುಂಡಗಿನ | ಮರ |

## ಊಹಿಸಿ ಬರೆಯುವ

- ಅಪರಿಚಿತ ದ್ವೀಪದ ಮರಳರಾಶಿಗೆ ಎಸೆಯಲ್ಪಟ್ಟ ಸಿಂದಬಾದನು ಆಡಿರಬಹುದಾದ ಮಾತುಗಳನ್ನು ಊಹಿಸಿ ಬರೆಯಿರಿ.

ಅ) ಉದಾ: ಸಿಂದಬಾದ್– (ಸ್ವಗತ) ಅಯ್ಯೋ ನಾನೆಲ್ಲಿದ್ದೇನೆ? ನನ್ನ ಜೊತೆಗಾರರು ಯಾರು ಇಲ್ಲವೇ? ಈ ಪ್ರದೇಶವನ್ನು ನಾನು ಇದುವರೆಗೆ ನೋಡಿಲ್ಲವಲ್ಲಾ! ಈ ದ್ವೀಪದಲ್ಲಿ ಏನೆಲ್ಲಾ ಇದೆಯಂದು ಪರೀಕ್ಷಿಸಿ ನೋಡಬೇಕು. ಈ ಎತ್ತರವಾದ ಮರವನ್ನು ಏರಿದರೆ ತುಂಬಾ ದೂರದವರೆಗೆ ಕಾಣಬಹುದು! (ಮರವನ್ನು ಏರುವನು) ಆ ಸಂದರ್ಭದಲ್ಲಿ ಸಿಂದಬಾದನು ಏನೆಂದು ಯೋಚಿಸಿರಬಹುದು. ಊಹಿಸಿ ಬರೆಯಿರಿ.

ಆ) (ಮರದ ತುದಿಯಲ್ಲಿ ನಿಂತು.)

ಸಿಂದಬಾದ್– (ಸ್ವಗತ) ತುಂಬಾ ದೂರದವರೆಗೆ ಕಾಣುತ್ತಿದೆ. ಓಹೋ!! ಅದೇನು?!

..........................................................................................................

..........................................................................................................

### ಕಥೆಯನ್ನು ಹೇಳಿರಿ

- ನಾವಿಕ ಸಿಂದಬಾದ್‌ನ ಕಥೆಯನ್ನು ಓದಿದಿರಲ್ಲವೇ. ಅದನ್ನು ನಿಮ್ಮದೇ ರೀತಿಯಲ್ಲಿ ತರಗತಿಯಲ್ಲಿ ಹೇಳಿರಿ.

### ಕಥೆ ರಚಿಸಿರಿ

- ಸಿಂದಬಾದ್‌ನಂತೆ ನೀವು ಆ ಅಪರಿಚಿತ ದ್ವೀಪಕ್ಕೆ ತಲುಪಿದ್ದರೆ ಏನು ಮಾಡುತ್ತಿದ್ದಿರಿ? ಊಹಿಸಿ ಕತೆಯನ್ನು ಬರೆಯಿರಿ. ತರಗತಿಯ ಸಂಚಿಕೆಯಲ್ಲಿ ಪ್ರಕಟಿಸಿರಿ.

### ಸಮರ್ಥಿಸುವ

- ರಾಜೇಶ ನಾಲ್ಕನೆಯ ತರಗತಿಯ ವಿದ್ಯಾರ್ಥಿ. ಅವನ ಕನ್ನಡ ಟೀಚರು ಕರಿಹಲಗೆಯಲ್ಲಿ ಕೆಲವು ಪದಗಳನ್ನು ಬರೆದು ಅವುಗಳನ್ನು ವರ್ಗೀಕರಿಸಿ ಬರೆಯಲು ಹೇಳಿದರು. ರಾಜೇಶನು ಆ ಪದಗಳನ್ನು ಈ ರೀತಿ ಬರೆದನು.

| 1ನೇ ಗುಂಪು | 2ನೇ ಗುಂಪು |
|---|---|
| ಬಾಗ್ದಾದ್ | ಹೊರಡು |
| ರಾಕ್ ಹಕ್ಕಿ | ಎಸೆಯು |
| ಹಡಗು | ಪರೀಕ್ಷಿಸು |
| ದ್ವೀಪ | ಇಳಿಯು |
| ಮೊಟ್ಟೆ | ಬಿಡಿಸಿಕೊಳ್ಳು |
| ಮುತ್ತುರತ್ನಗಳು | ನೆನಪಾಗು |
| ವರ್ತಕರು | ಗಲಾಟೆ ಮಾಡು |

- ಅಧ್ಯಾಪಿಕೆ "ಭೇಷ್, ಸರಿಯಾಗಿದೆ" ಎಂದರು. ರಾಜೇಶನು ವಿಂಗಡಿಸಿದ ಗುಂಪುಗಳಲ್ಲಿರುವ ಪದಗಳ ವಿಶೇಷತೆ ಏನು? ಇದು ಹೇಗೆ ಸರಿಯಾಗಿದೆ? ಸಮರ್ಥಿಸಿರಿ.

### ಗುಂಪು ಮಾಡುವ

- ಕೆಳಗೆ ಕೊಡಲಾದ ಪದಗಳನ್ನು ನಾಮಪದ ಕ್ರಿಯಾಪದ ಎಂದು ಗುಂಪು ಮಾಡಿ ಬರೆಯಿರಿ.


ಶಾಲೆ ಬರೆಯು ಬೆಂಚು ಓಡಿಸು ದನ ತಿನ್ನು

ಮನೆ ಜೀಪು ಪುತ್ತೂರು

ಕುಡಿಯು ಮಲಗು ಓದು ತೆಂಗಿನ ಮರ

### ಪದಬಂಧವನ್ನು ಪೂರ್ತಿಗೊಳಿಸುವ

- ಕೆಳಗೆ ನೀಡಿರುವ ಸೂಚನೆಗಳ ಸಹಾಯದಿಂದ ಪದಬಂಧವನ್ನು ಪೂರ್ತಿಗೊಳಿಸಿರಿ



**ಎಡದಿಂದ ಬಲಕ್ಕೆ**

2. ನೌಕೆಯನ್ನು ನಡೆಸುವ ಈತ ಕವಿಯೂ ಹೌದು (3)
4. ಅಲ್ಲಿ ಇಲ್ಲಿ ಲೊಚಗುಟ್ಟುವ ಜೀವಿ ತಿರುಗಿದೆ. (2)
7. ವಾನರ ವಾಸಿಸುವ ಕಾಡು (2)
8. ಮಣ ಮಣ ಹೇಳುತ್ತಾ ಮಾಡಿದ ಯಾತ್ರೆ (3)

**ಮೇಲಿನಿಂದ ಕೆಳಕ್ಕೆ**

1. ಮೆಲ್ಲಮೆಲ್ಲಗೆ ಕೊಯ್ದ ಪರಿಮಳಯುಕ್ತ ಹೂವು (3)
3. ಅಶ್ವ ಸುತ್ತಿದ ಜಗತ್ತು (2)
5. ಲಕಲಕ ಹೊಳೆಯುವ ಚಿನ್ನ (3)
6. ಭವ್ಯಳಿಗೆ ಆದ ಹೆದರಿಕೆ (2)

- ಈ ಪತ್ರವನ್ನು ಓದಿರಿ.

## ಅಮ್ಮನಿಗೆ ಪತ್ರ

ಮೈಸೂರು
20.10.14

*ಪ್ರೀತಿಯ ಅಮ್ಮ,*

*ನಿಮ್ಮ ಚರಣಾರವಿಂದಗಳಲ್ಲಿ ಬಾಲಕ ದಯಾನಂದನು ಮಾಡುವ ಪ್ರಣಾಮಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನೀವು ಕ್ಷೇಮವೆಂದು ಭಾವಿಸುತ್ತೇನೆ. ನಾವೆಲ್ಲ ಶಾಲೆಯಿಂದ ಪ್ರವಾಸ ಹೋಗುತ್ತೇವೆಂದು ನಿಮಗೆ ತಿಳಿಸಿದ್ದೆನಲ್ಲವೇ? ಕಳೆದ ವಾರ ನಾವು ಬಿಜಾಪುರದ ಗೋಲಗುಮ್ಮಟವನ್ನು ನೋಡಲು ಹೋಗಿದ್ದೆವು.*

*ನೂರಾರು ಎಕರೆ ವಿಶಾಲವಾದ ಮೈದಾನದ ನಡುವೆ ಗೋಲಗುಮ್ಮಟವಿದೆ. ಅದು ನೋಡಲು ಅತ್ಯಂತ ರಮಣೀಯವಾಗಿದೆ. ಒಂದು ಗುಮ್ಮಟವನ್ನು ನಾಲ್ಕು ಬಲವಾದ ಗೋಪುರಗಳು ಹೊತ್ತು ನಿಂತಿವೆ. ನಾವು ಟಿಕೇಟು ಪಡೆದುಕೊಂಡು ಆ ಗೋಪುರದ ಮೆಟ್ಟಲು ಏರತೊಡಗಿದೆವು. ಅಲ್ಲಿ ಗೋಪುರವನ್ನು ಏರುವುದೇ ಒಂದು ರೋಮಾಂಚಕ ಅನುಭವ. ಒಂದೊಂದು ಗೋಪುರದಿಂದಲೂ ಬಿಜಾಪುರದ ಒಂದೊಂದು ಪಟ್ಟಣ ಒಂದೊಂದು ಬಗೆಯಲ್ಲಿ ಕಾಣಿಸುತ್ತಿತ್ತು. ಮೆಟ್ಟಿಲುಗಳನ್ನೆಲ್ಲ ಏರಿ*

ಪ್ರಾಂಗಣಕ್ಕೆ ಬಂದಾಗ ಗೋಪುರ ಅದ್ಭುತವಾಗಿ ಕಾಣಿಸಿತು. ಗುಮ್ಮಟದ ಒಳಗಡೆ ಪ್ರವೇಶಿಸಿದೆವು. ಆಶ್ಚರ್ಯ ! ಅಮ್ಮಾ ಅಲ್ಲಿ ಪ್ರತಿಯೊಬ್ಬರ ಒಂದು ಮಾತು ಏಳು ಮಾತಾಗಿ, ಒಂದು ಸ್ವರ ಏಳು ಸ್ವರವಾಗಿ ಕೇಳಿಸುತ್ತಿತ್ತು. ಗುಮ್ಮಟದ ಒಂದು ಬದಿಯ ಗೋಡೆಗೆ ಕಿವಿಯೊಡ್ಡಿದರೆ ನೂರಾರು ಅಡಿ ಆಚೆ ಇರುವ ಗೋಡೆಯಿಂದ ಪಿಸು ನುಡಿದದ್ದು ನಮ್ಮ ಕಿವಿಯಲ್ಲೇ ಹೇಳಿದಂತೆ ಅನಿಸುತ್ತಿತ್ತು. ಅಲ್ಲಿ ಗುಟ್ಟು ಹೇಳಲೇಬಾರದು. ಎಲ್ಲಾದರೂ ಹೇಳಿದರೆ ಗೋಡೆಗೆ ಕಿವಿಗೊಟ್ಟವರಿಗೆಲ್ಲಾ ಘಂಟಾಘೋಷವಾಗಿ ಕೇಳಿಸುತ್ತದೆ. ಜಗತ್ತಿನ ಆಶ್ಚರ್ಯಗಳಲ್ಲಿ ಒಂದಾದ ಗೋಲಗುಮ್ಮಟ ನಿಜಕ್ಕೂ ನೋಡಲೇಬೇಕಾದ ಜಾಗ. ರಜೆಯಲ್ಲಿ ನೀವೂ ಒಮ್ಮೆ ಹೋಗಿ ಬನ್ನಿ.

ಹೆಚ್ಚಿನ ವಿಷಯಗಳನ್ನು ಮತ್ತೆ ಬರೆಯುತ್ತೇನೆ.

ಇತಿ ನಿಮ್ಮ ಪ್ರೀತಿಯ ಮಗ

ದಯಾನಂದ

## ಉತ್ತರಿಸುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

1. ಪತ್ರವನ್ನು ಬರೆದವರು ಯಾರು?
2. ಪತ್ರವನ್ನು ಯಾರಿಗೆ ಬರೆದಿದ್ದಾರೆ?
3. ಪತ್ರವನ್ನು ಎಲ್ಲಿಂದ ಬರೆಯಲಾಗಿದೆ?
4. ಪತ್ರವನ್ನು ಯಾವಾಗ ಬರೆಯಲಾಗಿದೆ?
5. ಪತ್ರದಲ್ಲಿ ಯಾವುದರ ಕುರಿತು ಬರೆಯಲಾಗಿದೆ?
6. ಪತ್ರದ ಆರಂಭ ಹೇಗಿದೆ?
7. ಪತ್ರದ ಕೊನೆ ಹೇಗಿದೆ?

## ಚರ್ಚಿಸುವ

- ಪತ್ರದ ಬರವಣಿಗೆಯಲ್ಲಿ ಕಾಲದಿಂದ ಕಾಲಕ್ಕೆ ಉಂಟಾದ ಬದಲಾವಣೆಗಳ ಕುರಿತು ತರಗತಿಯಲ್ಲಿ ಚರ್ಚಿಸಿರಿ.

# ಬಾನಿನಗಲ ಪಟಪಟ

ಪಟಪಟ ಎಂದು ಹಾರುವ ಗಾಳಿಪಟವು ಆಕಾಶದಲ್ಲಿ ತೇಲಿ ಮೇಲಕ್ಕೇರುತ್ತದೆ. ಹಾರುತ್ತ ದೂರದೂರ ಹೋಗಿ ಚಂದ್ರಲೋಕಕ್ಕೆ ಹೋಗಿಬಿಟ್ಟಿತೇನೋ ಎಂಬಂತೆ ಭಾಸವಾಗುತ್ತದೆ. ಬಾನಿನ ತುದಿಗೆ ಹಾರಿಹೋಗುವ ಈ ಬಣ್ಣದ ಹಕ್ಕಿಯ ಸೊಬಗನ್ನು ಕಣ್ತುಂಬ ನೋಡಿ ಖುಷಿಪಡದವರು ಯಾರು? 'ನಾನೂ ಅದರಂತೆ ಹಾರುತ್ತಿದ್ದರೆ' ಎಂಬ ಬಯಕೆ ಪುಟಿದೇಳುತ್ತದೆ. ಗಾಳಿಪಟ ಹಾರಿಸುವುದೂ ಒಂದು ರೋಚಕ ಅನುಭವ. ಇದು ಅತಿ ಎತ್ತರದಲ್ಲಿ ಹಾರುತ್ತಿರುವುದನ್ನು ಕಂಡಾಗ ಮನಸ್ಸು ಮುದಗೊಳ್ಳುತ್ತದೆ. ಉತ್ಸಾಹ ಇಮ್ಮಡಿಸುತ್ತದೆ. ಗಾಳಿಪಟಕ್ಕೂ ಮಕ್ಕಳಿಗೂ ಬಿಡಿಸಲಾಗದ ನಂಟು. ಮಕ್ಕಳು ಗೆಳೆಯರೊಡನೆ ಸೇರಿಕೊಂಡು ಬೇರೆಬೇರೆ ತರದ ಗಾಳಿಪಟಗಳನ್ನು ತಯಾರಿಸುತ್ತಾರೆ. ಅವುಗಳನ್ನು ಹಾರಿಸುತ್ತಾ ಇಹವನ್ನೇ ಮರೆಯುತ್ತಾರೆ.

ಕ್ರಿಸ್ತಪೂರ್ವ ಮೂರನೇ ಶತಮಾನದಲ್ಲಿ ಗ್ರೀಸ್ ದೇಶದ ಅಚಿಟಿಸ್ ಎಂಬವನು ಗಾಳಿಪಟವನ್ನು ಕಂಡು ಹಿಡಿದನೆಂದು ಹೇಳುತ್ತಾರೆ. ಚೀನಾದ ಸೇನಾಧಿಪತಿ ಹಗ್‌ಸನ್ ಕ್ರಿಸ್ತ ಪೂರ್ವ 206ರಲ್ಲಿ ಯುದ್ಧತಂತ್ರವಾಗಿ ಗಾಳಿಪಟವನ್ನು ಬಳಸಿದನೆಂದು ತಿಳಿದುಬರುತ್ತದೆ. ಪ್ಯಾರಾಚೂಟ್ ಹೆಲಿಕಾಪ್ಟರ್ ಮುಂತಾದವುಗಳು ಹುಟ್ಟಿಕೊಳ್ಳುವುದಕ್ಕೂ ಗಾಳಿಪಟವೇ ಪ್ರೇರಣೆಯಾಗಿದೆ. ಚೀನಾದಲ್ಲಿ ಗಾಳಿಪಟ ಸ್ಪರ್ಧೆಯು ರಾಷ್ಟ್ರೀಯ ಕ್ರೀಡೆ ಎನಿಸಿಕೊಂಡಿದೆ. ಜಪಾನ್ ದೇಶದಲ್ಲಿ ಪ್ರತಿ ವರ್ಷ ಮೇ 5ರಂದು ಎಲ್ಲಾ ಮನೆಯವರು ತಮ್ಮ ಮನೆಯ ಗಂಡುಮಕ್ಕಳ ಸಂಖ್ಯೆಯಷ್ಟು ಗಾಳಿಪಟ ಹಾರಿಸುತ್ತಾರೆ. ನ್ಯೂಝಿಲೇಂಡ್‌ನವರು ಹಾಡುಗಳನ್ನು ಹೇಳುತ್ತಾ ಧಾರ್ಮಿಕ ವಿಧಿವಿಧಾನಗಳೊಂದಿಗೆ ಗಾಳಿಪಟವನ್ನು ಹಾರಿಸುತ್ತಾರೆ. ಅಮೇರಿಕಾದಲ್ಲಿ ಹುಡುಗಹುಡುಗಿಯರಿಗೆಂದೇ ಗಾಳಿಪಟ ಸ್ಪರ್ಧೆಗಳು ನಡೆಯುತ್ತವೆ. ಹೀಗೆ ಪ್ರಪಂಚದೆಲ್ಲೆಡೆ ಗಾಳಿಪಟ ಸ್ಪರ್ಧೆಗಳು ನಡೆಯುತ್ತವೆ; ಗಾಳಿಪಟಗಳು ಹಾರಾಡುತ್ತವೆ.

ಗಾಳಿಪಟದ ಹಾರಿಸುವಿಕೆ ಭಾರತದಲ್ಲೂ ಬಹಳ ವರ್ಷದಿಂದ ಪ್ರಚಲಿತವಾಗಿದೆ. ಅಹಮದಾಬಾದ್, ಮಹಾರಾಷ್ಟ್ರ, ಗುಜರಾತ್, ಲಕ್ನೋ ಮುಂತಾದ ಕಡೆಗಳಲ್ಲಿ ಬಹಳ ಹಿಂದಿನಿಂದಲೂ ಗಾಳಿಪಟ ಸ್ಪರ್ಧೆ ನಡೆಯುತ್ತಿದೆ. ಅಯೋಧ್ಯೆಯ ನವಾಬರು ಈ ಸ್ಪರ್ಧೆಗಳನ್ನು ನಡೆಸುತ್ತಿದ್ದರು ಎಂಬ ಮಾತಿದೆ. ನಮ್ಮ ನೆರೆಯ ಮಂಗಳೂರಿನ ಕಡಲ ಕಿನಾರೆಗಳಲ್ಲಿ ಗಾಳಿಪಟ ಉತ್ಸವವನ್ನು ಏರ್ಪಡಿಸುತ್ತಾರೆ.

ಮನುಷ್ಯ, ಪ್ರಾಣಿಪಕ್ಷಿಗಳು, ವಾಹನಗಳೇ ಮೊದಲಾದ ವಿವಿಧ ಆಕೃತಿಯ ಗಾಳಿಪಟಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಯಕ್ಷಗಾನ, ಕಥಕಳಿಯ ವೇಷಗಳು ಮೊದಲಾದ ಆಕೃತಿಗಳನ್ನು ಹೋಲುವ ವಿವಿಧ ಗಾತ್ರ ಹಾಗೂ ಬಣ್ಣದ ಗಾಳಿಪಟಗಳು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಇಂತಹ ಗಾಳಿಪಟಗಳ ಸೌಂದರ್ಯಕ್ಕೆ ವಿದೇಶೀಯರೂ ಮನಸೋತಿದ್ದಾರೆ. ಆಗಾಗ ನಡೆಯುವ ಗಾಳಿಪಟ ಉತ್ಸವಗಳು ಕಡಲ ತೀರಗಳನ್ನು ಪ್ರವಾಸೀ ತಾಣಗಳನ್ನಾಗಿ ಮಾಡುವಲ್ಲಿ ಸಹಕಾರಿಯಾಗಿವೆ.

ಆಕರ್ಷಕವಾದ ಗಾಳಿಪಟವನ್ನು ತಯಾರಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಇದಕ್ಕೆ ತಾಳ್ಮೆಯೂ ಪ್ರತಿಭೆಯೂ ಬೇಕು. ಸಾಮಾನ್ಯ ಗಾಳಿಪಟವು ವಜ್ರಾಕೃತಿಯ ರಚನೆಯಾಗಿದೆ. ಬಿದಿರು ಅಥವಾ ತೆಳುವಾದ ಬೆತ್ತದ ಎರಡು ಕಡ್ಡಿಗಳನ್ನು ಲಂಬವಾಗಿ ಜೋಡಿಸಿ ಗಾಳಿಪಟದ ಚೌಕಟ್ಟನ್ನು ಸಿದ್ಧಪಡಿಸುತ್ತಾರೆ. ಈ ಚೌಕಟ್ಟಿನ ಮೇಲೆ ಗಾಳಿಗೆ ಹರಿದು ಹೋಗದಂತಹ ಕಾಗದವನ್ನು ಅಂಟಿಸುತ್ತಾರೆ. ಇದಕ್ಕಾಗಿ ಲಿನೆನ್, ಕ್ಯಾಲ್ಕೋ, ಅಥವಾ ಅಂಟುಬಟ್ಟೆಯನ್ನು ಬಳಸುತ್ತಾರೆ. ಗಾಳಿಪಟ ಹೆಚ್ಚು ಬಲಬರುವಂತೆ ಮಾಡಲು ಚೌಕಟ್ಟಿನ ಮೇಲರ್ಧದಲ್ಲಿ ಬಿದಿರು ಅಥವಾ ಬೆತ್ತದ ಕಡ್ಡಿಯನ್ನು ಬಿಲ್ಲಿನಂತೆ ಬಾಗಿಸಿ ಜೋಡಿಸುತ್ತಾರೆ. ಗಾಳಿಪಟ ಸಮತೋಲನದಲ್ಲಿರುವಂತೆ ಎಚ್ಚರಿಕೆಯಿಂದ ಸರಿಯಾದ ಜಾಗದಲ್ಲಿ ದಾರವನ್ನು ಕಟ್ಟುತ್ತಾರೆ. ಗಾಳಿಪಟ ಕೆಳಗೆ ಉರುಳಿದರೂ ಮತ್ತೆ ಮೇಲೇರುವಂತೆ ಮಾಡಲು 'ಬಾಲಂಗೋಚಿ'ಯನ್ನು ಕಟ್ಟುತ್ತಾರೆ. ಬಾಲಂಗೋಚಿಯ ಉದ್ದ ಗಾಳಿಪಟದ ಉದ್ದದ ಎರಡರಷ್ಟಿರುತ್ತದೆ. ಬಟ್ಟೆ, ಕಾಗದದ ಪಟ್ಟಿ, ಸುತ್ತು ಹಗ್ಗವನ್ನು ಬಾಲಂಗೋಚಿಯಾಗಿ ಸೇರಿಸುತ್ತಾರೆ.



ಗಾಳಿಪಟ ಎಲ್ಲರ ಗೆಳೆಯ. ಅದು ಆಕಾಶದ ತುದಿಗೆ ಏರುತ್ತಿದ್ದಂತೆ ನಮ್ಮ ಉತ್ಸಾಹವೂ ಏರುತ್ತದೆ. ನಾವು ಎತ್ತರೆತ್ತರ ಏರಬೇಕು ಎಂಬ ಧ್ಯೇಯವನ್ನು ನೆನಪಿಸುತ್ತದೆ.

## ಚಟುವಟಿಕೆಗಳು

### ಉತ್ತರ ಬರೆಯುವ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ನ್ಯೂಝಿಲ್ಯಾಂಡ್‌ನಲ್ಲಿ ಯಾವ ರೀತಿ ಗಾಳಿಪಟವನ್ನು ಹಾರಿಸುತ್ತಾರೆ ?
2. ಗಾಳಿಪಟವನ್ನು ತಯಾರಿಸುವ ವಿಧಾನ ಹೇಗೆ?

## ಹಾಡುವ ನಲಿಯುವ

# ಗಾಳಿಪಟ

ಕಾಗದ ಕಡ್ಡಿಯ ಅಂಟನು ತಂದು
ರಚಿಸಿದನೊಂದು ಗಾಳಿಪಟ
ತಾಗಿಸಿ ಬಾಲವ ಹಾರಿಸಿ ಬಿಟ್ಟನು
ತೇಲಿಸಿ ಗಾಳಿಲಿ ಲಟಾಪಟ ॥

ಉರುಳುತ ಅಲೆಯಲಿ ಸುಳಿಯುತ ಸುಳಿಯಲಿ
ಏರಿತು ಮೇಲಕೆ ಗಾಳಿಪಟ
ತಿರುಗಿತು ಚೆಂದದಿ ಕುಣಿಯುತ ಬಾಲವು
ಬಾನಂತರದಲಿ ಲಟಾಪಟ ॥

ಉದ್ದದ ದಾರವ ಮಧ್ಯಕೆ ಕಟ್ಟಿ
ಬಯಲಲಿ ಮಾಡಿದೆ ಓಡಾಟ
ಬಿದ್ದೇಳುತ ಆಗಸದಲಿ ಹಾರಿತು
ಚೆಂದದ ಬಣ್ಣದ ಗಾಳಿಪಟ ॥

ದೂರದಿ ಕಾಣುವ ಆಗಸ ಮುಟ್ಟುವೆ–
ನೆಂದಿತು ಏರಿತ ಗಾಳಿಪಟ
ಸಾಗುವೆ ಸೂರ್ಯನ ಕರೆತರಲೆಂದು
ಓಡಿತು ರಭಸದಿ ಗಾಳಿಪಟ ॥

## ಪದ ಸಂಕೋಲೆ ರಚಿಸುವ

- ನೀಡಿದ ಪದದ ಕೊನೆಯ ಅಕ್ಷರದಿಂದ ಆರಂಭವಾಗುವಂತಹ ಪದಗಳನ್ನು ಬರೆದು ಪದ ಸಂಕೋಲೆ ರಚಿಸಿರಿ.
  - ವಾರ್ಷಿಕೋತ್ಸವ – ವರದಿ – ದಿನ – ನವಿಲು
  - 

## ಪದ್ಯ ರಚಿಸುವ

- ಗಾಳಿಪಟ ಪದ್ಯವನ್ನು ಓದಿದಿರಲ್ಲವೆ? ಗಾಳಿಪಟದ ಬಗ್ಗೆ ಒಂದು ಪದ್ಯವನ್ನು ರಚಿಸಿರಿ. ಅದಕ್ಕೆ ಸೂಕ್ತವಾದ ಶೀರ್ಷಿಕೆಯನ್ನು ನೀಡಿರಿ.

## ಪದಗಳನ್ನು ಕ್ರಮೀಕರಿಸಿ ವಾಕ್ಯ ರಚಿಸುವ

- ಅಕ್ಷರಗಳನ್ನು ಕ್ರಮೀಕರಿಸಿ ಪದಗಳನ್ನು ರಚಿಸಿರಿ. ವೃತ್ತದೊಳಗೆ ಬಂದ ಅಕ್ಷರಗಳಿಂದ ಹೊಸ ಪದವನ್ನು ರಚಿಸಿರಿ.

  - ಕಬಕಂಳಿಪ್ಪು
  - ಎಗಾತ್ತಿನಡಿ
  - ಳಹುಬವಸನ
  - ಲನದಬಾದ
  - ಸಮಳುಕ್ಕಣ್ಣ
  - ಕಟರುನಾಕಿ
  - ಡುಲಪಯಿವಕಾ

| | | | | | | |
|---|---|---|---|---|---|---|
| | ಣ್ಣ | | | | | ಟ |

## ಗಾಳಿಪಟ ತಯಾರಿಸುವ

- ಗಾಳಿಪಟದ ಕುರಿತಾದ ಲೇಖನವನ್ನು ಓದಿದಿರಲ್ಲವೇ? ನೀವು ಕೂಡ ಗಾಳಿಪಟವನ್ನು ತಯಾರಿಸಿ ಹಾರಿಸಿರಿ.

## ಚಿತ್ರ ಬಿಡಿಸುವ

- ಗಾಳಿಪಟ ಹಾರಿಸುವ ಚಿತ್ರವನ್ನು ಬಿಡಿಸಿರಿ. ತರಗತಿಯಲ್ಲಿ ಪ್ರದರ್ಶಿಸಿರಿ.

## ಸಂಚಿಕೆ ತಯಾರಿಸುವ

- ಗಾಳಿಪಟದ ಬಗ್ಗೆ ನೀವು ರಚಿಸಿದ ಪದ್ಯಗಳನ್ನು ಹಾಗೂ ಗಾಳಿಪಟ ಹಾರಿಸುವ ಚಿತ್ರಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

# ಜೋಗದ ಸಿರಿ

ಗುರುಗಳೊಡನೆ ಹರುಷದಿಂದ
ಬಿಡುವಿನಲ್ಲಿ ಪಯಣಕೆ
ಗೆಳೆಯರೊಡನೆ ನೋಡಲೆಂದು
ಹೋದೆ ನಾನು ಜೋಗಕೆ

ಒಡಲಿನಲ್ಲಿ ನಮ್ಮನಿರಿಸಿ
ಭರದಿ ಬಸ್ಸು ಹೊರಟಿತು
ಹೂವಿನಂತೆ ಹೃದಯ ಅರಳಿ
ಸಗ್ಗ ಸಿರಿಯ ಕಂಡಿತು.



ಹಾವಿನಂತೆ ಸುತ್ತಿ ಸುತ್ತಿ
ಬಸ್ಸು ಬೆಟ್ಟವೇರಿತು
ನಮಗೆ ಅರಿಯದಂತೆ ತಾನು
ಜೋಗ ಫಾಲ್ಸ ತಲುಪಿತು

ಬೆಟ್ಟದಿಂದ ಜಾರಿ ಕೆಳಗೆ
ನೀರು ಬೀಳುತಿರುವುದು
ನೋಡುವವರ ಕಣ್ ಮನವ
ತಣಿಸಿ ಕುಣಿಸಿ ಬಿಡುವುದು

ವಿದ್ಯುಚ್ಛಕ್ತಿಧಾಮ ಉಂಟು
ಭವ್ಯ ಬೆಟ್ಟದಡಿಯಲಿ
ಇಳಿದು ಹೋಗಲುಂಟು ನಮಗೆ
ಟ್ರಾಲಿ ಗಾಡಿ ಸುಲಭದಿ

ಸೃಷ್ಟಿ ಸೊಬಗು ನೋಡಲೆಂದು
ಜನರು ಓಡಿ ಬರುವರು
ಧುಮುಕಿ ಬರುವ ಝರಿಯ ಕಂಡು
ಹಿಗ್ಗಿ ನಲಿವರೆಲ್ಲರು

*ಪ.ಗು. ಸಿದ್ಧಾಪುರ*

## ಚಟುವಟಿಕೆಗಳು

### ಉತ್ತರಿಸುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
  1. ಬಸ್ಸು ಬೆಟ್ಟವನ್ನು ಹೇಗೆ ಏರಿತು?
  2. ನೋಡುವವರ ಕಣ್‌ಮನವನ್ನು ತಣಿಸುವುದು ಯಾವುದು?
  3. ಜನರು ಜೋಗಕ್ಕೆ ಯಾಕೆ ಬರುವರು?
  4. ಜೋಗದ ವಿಶೇಷತೆಗಳೇನು?

### ಪ್ರಾಸ ಪದ ಬರೆಯುವ

- ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಬರೆಯಿರಿ.

### ಆಲ್ಬಂ ತಯಾರಿಸುವ

- ಪ್ರವಾಸಿ ತಾಣಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

### ಆಶಯ ಬರೆಯುವ

- 'ಜೋಗದ ಸಿರಿ' ಪದ್ಯವನ್ನು ಓದಿದಿರಲ್ಲವೇ? ಪದ್ಯದ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

### ವಾಕ್ಯ ರಚಿಸುವ


- ಕೋಣೆಯಲ್ಲಿ ಕೊಟ್ಟಿರುವ ಪದಗಳನ್ನು ಉಪಯೋಗಿಸಿಕೊಂಡು ಸಾಧ್ಯವಿರುವಷ್ಟು ಅರ್ಥಪೂರ್ಣವಾದ ವಾಕ್ಯಗಳನ್ನು ಬರೆಯಿರಿ.

| | | | |
|---|---|---|---|
| ಹರುಷ | ಪಯಣ | ಗೆಳೆಯ | ಬಸ್ಸು |
| ಸೊಬಗು | ಹಿಗ್ಗು | ನೋಡು | ನೀರು |
| ಬೆಟ್ಟ | ಜನರು | ನಲಿವು | ಕಣ್ಣು |

ಮಾದರಿ: ಜಲಪಾತವನ್ನು ಕಂಡು ಮಕ್ಕಳಿಗೆ ಹರುಷವಾಯಿತು.

## ಪದಸೂರ್ಯ

- ನದಿಗೆ ಸಂಬಂಧಿಸಿದ ಪದಗಳನ್ನು ಸೇರಿಸಿ ಪದಸೂರ್ಯ ರಚಿಸಿರಿ.




## ವರ್ಣನೆ ಬರೆಯುವ

- ನೀವು ನದಿಯನ್ನು ನೋಡಿದ್ದೀರಲ್ಲವೇ? ನದಿ ಹೇಗೆ ಹರಿಯುತ್ತದೆ? ನದಿಯಲ್ಲಿ ಏನೇನು ಇವೆ? ನದಿ ತೀರದಲ್ಲಿ ಏನೇನು ಕಾಣಿಸುತ್ತವೆ? ನದಿಯ ಪಕ್ಕದ ಬಯಲು, ತೋಟಗಳೆಲ್ಲ ಹೇಗಿವೆ? ಇವೆಲ್ಲವನ್ನೂ ಸೇರಿಸಿಕೊಂಡು ನದಿಯ ವರ್ಣನೆ ಬರೆಯಿರಿ.

## ಪದ್ಯ ಮುಂದುವರಿಸುವ, ಶೀರ್ಷಿಕೆ ನೀಡುವ

- ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ. ಸರಿಯಾದ ಶೀರ್ಷಿಕೆ ಕೊಡಿರಿ.

ಕಲ ಕಲ ಹರಿಯುತ
ಥಳ ಥಳ ಹೊಳೆಯುತ
ಜಲವನು ನೀಡುವ ನಮ್ಮ ನದಿ

.........................................

.........................................

.........................................

## ಅರ್ಥಕೋಶ

| | | |
|---|---|---|
| ಕಣಿವೆ | – | ಕಂದಕ |
| ಕಿನಾರೆ | – | ತೀರ, ದಡ |
| ಕುತೂಹಲ | – | ಆತುರ, ತವಕ |
| ಕ್ಷೇಮ | – | ನೆಮ್ಮದಿ, ಸುಖ |
| ಗೋಪುರ | – | ಮಹಾದ್ವಾರ |
| ಘಂಟಾಘೋಷ | – | ಗಂಟೆಯ ಗಟ್ಟಿಯಾದ ಶಬ್ದ |
| ಚರಣಾರವಿಂದ | – | ಪಾದಕಮಲ |
| ಜೊತೆಗಾರ | – | ಸಂಗಡಿಗ |
| ಝರಿ | – | ಬೆಟ್ಟದಿಂದ ಹರಿದು ಬರುವ ಪ್ರವಾಹ |
| ತುಣುಕು | – | ಚೂರು, ತುಂಡು |
| ದಿಟ್ಟಿಸು | – | ನೆಟ್ಟ ನೋಟದಿಂದ ನೋಡು |
| ಧುಮುಕು | – | ಕೆಳಗೆ ಹಾರು |
| ನಂಟು | – | ಸಂಬಂಧ |
| ನಾವಿಕ | – | ಅಂಬಿಗ, ದೋಣಿ ಹಡಗು ಮೊದಲಾದುವನ್ನು ನಡೆಸುವವನು |
| ನುಚ್ಚುನೂರು | – | ಪುಡಿಪುಡಿ |
| ಪಯಣ | – | ಪ್ರಯಾಣ, ಯಾತ್ರೆ |
| ಪ್ರಣಾಮ | – | ನಮಸ್ಕಾರ, ವಂದನೆ |
| ಪ್ರಾಂಗಣ | – | ಅಂಗಳ |
| ಬಿಡುವು | – | ವಿರಾಮ, ವಿಶ್ರಾಂತಿ |
| ಬೆಳ್ಳಗಿನ | – | ಬಿಳಿ ಬಣ್ಣದ |
| ಭರದಿ | – | ರಭಸದಿಂದ, ವೇಗವಾಗಿ |
| ಭವ್ಯ | – | ಅದ್ಭುತ |
| ಭಾವಿಸು | – | ಆಲೋಚಿಸು, ಅಭಿಪ್ರಾಯಪಡು |
| ಭಾಸವಾಗು | – | ತೋರು |
| ಮರಳು | – | ಹ್ಯೊಗೆ, ಹಿಂತಿರುಗು |
| ಮುದ | – | ಸಂತೋಷ |
| ರಮಣೀಯ | – | ಮನೋಹರ |
| ರೋಮಾಂಚನ | – | ಪುಳಕ |
| ವರ್ತಕ | – | ವ್ಯಾಪಾರಿ |
| ಸಗ್ಗ | – | ಸ್ವರ್ಗ |
| ಸಿರಿ | – | ಸಂಪತ್ತು |

## ಕಲಿಕಾ ಸಾಧನೆಗಳು

- ಘಟನೆಗಳು, ದೃಶ್ಯಗಳು ಮೊದಲಾದುವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ವಿವರಿಸುವುದು ಮತ್ತು ಬರೆಯುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯವನ್ನು ಬರೆಯುವುದು.
- ಪಾಠಭಾಗವನ್ನು ವ್ಯವಹಾರ ರೂಪಕ್ಕೆ ತಕ್ಕಂತೆ ನಿರರ್ಗಳವಾಗಿ ಸ್ವರಭಾರ ಮತ್ತು ಉಚ್ಚಾರಸ್ಪಷ್ಟತೆಯೊಂದಿಗೆ ಓದುವುದು.
- ಪತ್ರಿಕಾ ವರದಿ ಮತ್ತು ವಾರ್ತೆಗಳನ್ನು ವಿಶ್ಲೇಷಿಸಿ (ಯಾರು, ಯಾರಿಗೆ, ಎಲ್ಲಿ, ಏನು, ಹೇಗೆ, ಯಾಕೆ, ICT ಸಾಧ್ಯತೆ) ಪತ್ರ, ಭಿತ್ತಿಪತ್ರ, ಕರಪತ್ರ ಮೊದಲಾದವುಗಳನ್ನು ರಚಿಸುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಯಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಪದಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಉತ್ತಮ ದಿನಚರಿಗಳನ್ನು ಓದುವುದು ಮತ್ತು ಸ್ವ ಅನುಭವಗಳನ್ನು ಅಳವಡಿಸಿ ದಿನಚರಿ ಬರೆಯುವುದು.
- ಪದಪ್ರಯೋಗ, ಭಾಷಾಪ್ರಯೋಗ, ಆಶಯ ಮೊದಲಾದವುಗಳನ್ನು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು.
- ಕೃತಿ ರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಸರ್ವನಾಮ ಹಾಗೂ ಉಪಸರ್ಗಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು.
- ಓದುವ ಮೂಲೆ, ವಾಚನಾಲಯ ಮತ್ತು ಇತರೆಡೆಗಳಿಂದ ಲಭಿಸುವ ಓದುವ ಸಾಮಾಗ್ರಿಗಳನ್ನು ಓದಿ ದೊರೆತ ಅನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಓದಿದ, ಆಲಿಸಿದ ವ್ಯವಹಾರದ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.

# 8. ಜ್ಞಾನ ವಿಜ್ಞಾನ



ಜ್ಞಾನವು ನಮ್ಮನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವುದು. ವಿಜ್ಞಾನವು ನಮಗೆ ಪ್ರಗತಿಯನ್ನು ತೋರುವುದು. ನಾವು ವಿವೇಚನೆಯಿಂದ ಮುಂದೆ ಸಾಗಬೇಕು. ಒಳ್ಳೆಯ ಕನಸುಗಳನ್ನು ನನಸಾಗಿಸಿ ಬದುಕನ್ನು ಸಾರ್ಥಕಪಡಿಸಬೇಕು.

# ಮೂಢಭಕ್ತಿ



ಓರ್ವ ಗುರುಗಳ ಬಳಿ ಇಬ್ಬರು ಶಿಷ್ಯರಿದ್ದರು. ಗುರುಗಳು ಒಂದು ದಿನ "ನಾನು ತೀರ್ಥಯಾತ್ರೆಗೆ ಹೋಗಿ ಬರುತ್ತೇನೆ. ಹಿಂತಿರುಗಲು ಹನ್ನೆರಡು ವರ್ಷಗಳಾಗಬಹುದು. ನನ್ನಲ್ಲಿ ಒಂದು ಸೇರು ಕಡಲೆಯಿದೆ. ಅದನ್ನು ನಿಮ್ಮಿಬ್ಬರಿಗೆ ಸಮಪಾಲು ಮಾಡಿಕೊಡುತ್ತೇನೆ. ಅದನ್ನು ಹೇಗೆ ಉಪಯೋಗಿಸಿದ್ದೀರಿ ಎಂಬುದನ್ನು ತೀರ್ಥಯಾತ್ರೆ ಮುಗಿಸಿಕೊಂಡು ಬಂದ ನಂತರ ನೋಡುತ್ತೇನೆ" ಎಂದು ಹೇಳಿ ತೀರ್ಥಯಾತ್ರೆಗೆ ಹೊರಟರು.

ದಿನಗಳುರುಳಿದುವು.

ತಿಂಗಳುಗಳು ಸರಿದವು.

ವರ್ಷಗಳು ಕಳೆದವು.

ಹನ್ನೆರಡನೇ ವರ್ಷ ಸಮೀಪಿಸುತ್ತಿತ್ತು.

ಶಿಷ್ಯರಿಬ್ಬರೂ ಗುರುಗಳನ್ನು ಎದುರುನೋಡುತ್ತಿದ್ದರು.

ಹನ್ನೆರಡನೇ ವರ್ಷದಲ್ಲಿ ಗುರುಗಳು ಪ್ರತ್ಯಕ್ಷರಾದರು.

ಮೊದಲ ಶಿಷ್ಯನು ಗುರುಗಳನ್ನು ಸತ್ಕರಿಸಿದನು.

“ನಾನು ಕೊಟ್ಟ ಕಡಲೆಯನ್ನು ಯಾವ ರೀತಿ ಉಪಯೋಗಿಸಿಕೊಂಡಿದ್ದೀಯಾ?” ಎಂದು ಗುರುಗಳು ಕೇಳಿದರು.

“ಇದು ತಮ್ಮ ಪ್ರಸಾದ” ಎಂದು ಭವ್ಯವಾದ ಬಂಗಲೆಯನ್ನು ತೋರಿಸಿದ. ಮತ್ತೆ “ಈ ಹತ್ತು ಎಕರೆ ಅಡಕೆ ತೋಟ, ಗೋಸಂಪತ್ತು ಎಲ್ಲವೂ ತಮ್ಮ ಪ್ರಸಾದವೇ ಸ್ವಾಮಿ” ಎಂದು ಹೇಳಿದನು.

ಗುರುಗಳು ವಿಸ್ಮಯದಿಂದ ಎಲ್ಲವನ್ನೂ ನೋಡಿ “ಈ ಪವಾಡ ಹೇಗಾಯಿತು?” ಎಂದು ಕೇಳಿದರು.

“ಇದರಲ್ಲಿ ಅಂಥ ಪವಾಡ ಏನಿದೆ? ಇದೆಲ್ಲಾ ಗುರು ಸ್ಮರಣೆಯ ಫಲ. ಅದೃಷ್ಟವಿದ್ದರೆ ಮುಟ್ಟಿದ ಮಣ್ಣೂ ಹೊನ್ನಾಗುವುದಂತೆ. ಭಕ್ತಿಯ ಗುರುಸೇವೆಗೆ ಬಯಸಿದ್ದಕ್ಕಿಂತ ಹೆಚ್ಚಾಗಿಯೇ ಫಲ ಸಿಕ್ಕಿದೆ. ನೀವು ಕೊಟ್ಟ ಅರ್ಧ ಸೇರು ಕಡಲೆಯನ್ನು ಹೊಲದಲ್ಲಿ ಬಿತ್ತಿದೆ. ಅದಕ್ಕೆ ಪ್ರತಿಯಾಗಿ ಇಪ್ಪತ್ತೈದು ಸೇರು ಕಡಲೆಯಾಯಿತು. ಮತ್ತೆ 25 ಸೇರನ್ನೂ ಬಿತ್ತಲು ಹತ್ತು ಚೀಲ ಕಾಳು ಸಿಕ್ಕಿತು. ಮತ್ತೊಮ್ಮೆ ಹತ್ತು ಚೀಲವನ್ನು ಬಿತ್ತಿದಾಗ 100 ಚೀಲಗಳಾದುವು. ಹೀಗೆ ಕೃಷಿ ನಡೆಸಿದೆ. ತಮ್ಮ ಆಶೀರ್ವಾದದಿಂದ ಇಷ್ಟೆಲ್ಲಾ ಪ್ರಾಪ್ತವಾಯಿತು” ಎಂದು ಸಂತೃಪ್ತಿಯಿಂದ ನುಡಿದನು.

ಶಿಷ್ಯನ ಸಾಹಸಕ್ಕೆ ಗುರುಗಳು ತಲೆದೂಗಿದರು.

ಆಗ ಎರಡನೆಯ ಶಿಷ್ಯ ಗುರುಗಳನ್ನು ಸಂಧಿಸಿ ನಮಸ್ಕರಿಸಿದನು. “ನಾನು ಕೊಟ್ಟ ಕಡಲೆಯನ್ನು ನೀನು ಹೇಗೆ ಉಪಯೋಗಿಸಿಕೊಂಡೆ?” ಎಂದು ಗುರುಗಳು ಕೇಳಿದರು. ಆತ ಕಂಕುಳದಲ್ಲಿ ಇರಿಸಿದ್ದ ಡಬ್ಬಿಯನ್ನು ಮುಂದಿಟ್ಟನು. ಡಬ್ಬಿಗೆ ಬೀಗಮುದ್ರೆಯಾಗಿತ್ತು, ಅದರ ಹೊರಮೈ ವಿಭೂತಿಯಿಂದ ಶೋಭಿಸುತ್ತಿತ್ತು. “ಇದೇನು?” ಎಂದು ಗುರುಗಳು ಕೇಳಿದರು.

“ಇದು ತಾವು ಕೊಟ್ಟ ಕಡಲೆ. ಅದನ್ನು ಈ ಡಬ್ಬಿಯಲ್ಲಿ ಹಾಕಿ, ಬೀಗ ಮುದ್ರೆಮಾಡಿ, ಪ್ರತಿದಿನವೂ ವಿಭೂತಿ ಹಚ್ಚಿ ಭಯಭಕ್ತಿಯಿಂದ ಪೂಜಿಸುತ್ತಿದ್ದೇನೆ” ಎಂದು ವಿನೀತನಾಗಿ ನುಡಿದ ಶಿಷ್ಯ.

“ಎಲ್ಲಿ ಡಬ್ಬಿಯ ಮುಚ್ಚಳವನ್ನು ತೆಗೆ.... ಕಡಲೆ ಏನಾಗಿದೆ ನೋಡೋಣ” ಎಂದರು ಗುರುಗಳು.

ಶಿಷ್ಯ ಮುಚ್ಚಳವನ್ನು ತೆಗೆದ. ಕಡಲೆ ಪುಡಿಯಾಗಿ ಧೂಳು ಹೊರಬರುತ್ತಿತ್ತು.

“ನಾನು ಕೊಟ್ಟ ಕಡಲೆಯನ್ನು ಅರಿತು ಉಪಯೋಗಿಸಿದ್ದರೆ ಅಕ್ಷಯವಾಗುತಿತ್ತು. ಸರಿಯಾಗಿ ಉಪಯೋಗಿಸದ ಕಾರಣ ನಿನ್ನ ಕಡಲೆ ಧೂಳಾಯಿತು. ಅವನು ಅರಿತು ಉಪಯೋಗಿಸಿ, ಬೇಕಾದಷ್ಟು ಹಣ ಸಂಪಾದಿಸಿ, ನನ್ನ ಅನುಗ್ರಹಕ್ಕೆ ಪಾತ್ರನಾದನು. ನೀನು ಮೂಢಭಕ್ತಿಗೆ ಒಳಗಾಗಿ ಕೊಟ್ಟ ಕಡಲೆಯನ್ನು ಕಳೆದುಕೊಂಡುದಲ್ಲದೆ, ಏನೊಂದೂ ಫಲ ಪಡೆಯದೆ ಹನ್ನೆರಡು ವರ್ಷ ವ್ಯರ್ಥ ಮಾಡಿಬಿಟ್ಟೆ. ಬರಿಯ ಪೂಜೆ ಮಾಡಿದರೆ ಹೊಟ್ಟೆ ತುಂಬುವುದಿಲ್ಲ. ಫಲವೂ ಸಿಗುವುದಿಲ್ಲ” ಎಂದು ಗುರುಗಳು ನುಡಿದರು. ಶಿಷ್ಯ ನಾಚಿ ತಲೆತಗ್ಗಿಸಿದನು.

## ಚಟುವಟಿಕೆಗಳು

### ಉತ್ತರ ಬರೆಯುವ

- ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

  1. ತೀರ್ಥಯಾತ್ರೆಗೆ ಹೊರಡುವಾಗ ಗುರುಗಳು ಶಿಷ್ಯರಿಗೆ ಏನು ಹೇಳಿದರು?
  2. ಮೊದಲ ಶಿಷ್ಯ ಮಾಡಿದ ಪವಾಡ ಯಾವುದು?
  3. ಎರಡನೇ ಶಿಷ್ಯ ಕಡಲೆಯನ್ನು ಹೇಗೆ ಉಪಯೋಗಿಸಿದನು?
  4. ಎರಡನೇ ಶಿಷ್ಯ ನಾಚಿ ತಲೆತಗ್ಗಿಸಲು ಕಾರಣವೇನು?

### ಚರ್ಚಿಸುವ

- "ಕಡಲೆಯನ್ನು ಅರಿತು ಉಪಯೋಗಿಸಿದರೆ ಅಕ್ಷಯವಾಗುತ್ತಿತ್ತು" ಎಂದು ಗುರುಗಳು ಹೇಳಿದ್ದೇಕೆ? ಚರ್ಚಿಸಿರಿ.

### ಮಾದರಿಯಂತೆ ಬರೆಯುವ

- ಕೆಳಗಿನ ಪದಗಳನ್ನು ಮಾದರಿಯಂತೆ ಬರೆಯಿರಿ.

| | | | | | |
|---|---|---|---|---|---|
| ಮಾದರಿ : ವರ್ಷ | – | ವರ್ಷಗಳು | ಶಿಷ್ಯ | – | ಶಿಷ್ಯರು |
| ತಿಂಗಳು | – | | ಹುಡುಗ | – | |
| ದಿನ | – | | ತಿರುಕ | – | |
| ಮರ | – | | ಶಿಕ್ಷಕ | – | |
| ಮೃಗ | – | | ವರ್ತಕ | – | |
| ಗುರು | – | | ಬೆಸ್ತ | – | |

### ವಿಂಗಡಿಸಿ ಬರೆಯುವ

- ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯಿರಿ

  ಉದಾ : ತಲೆದೂಗಿದರು – ತಲೆ + ತೂಗಿದರು.

  - ಪ್ರಾಪ್ತವಾಯಿತು –
  - ಕಡಲೆಯಾಯಿತು –

- ಪೂಜಿಸುತ್ತಿದ್ದೇನೆ –
- ಪುಡಿಯಾಗಿತ್ತು –
- ಧೂಳಾಯಿತು –
- ದಿನಗಳುರುಳಿದುವು –

## ಸರಿ ತಪ್ಪು ಬರೆಯುವ

- ಕೆಳಗೆ ಕೊಟ್ಟಿರುವ ಹೇಳಿಕೆಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ. ತಪ್ಪಾದ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.
  - ಗುರುಗಳ ಬಳಿ ಇಬ್ಬರು ಶಿಷ್ಯರಿದ್ದರು.
  - ಗುರುಗಳು ಪ್ರವಾಸಕ್ಕೆ ಹೊರಟರು.
  - ಶಿಷ್ಯನ ಸಾಹಸಕ್ಕೆ ಗುರುಗಳು ಸಿಟ್ಟಾದರು.
  - ಸರಿಯಾಗಿ ಉಪಯೋಗಿಸಿದ ಕಾರಣ ಕಡಲೆ ಧೂಳಾಯಿತು.
  - ಬರಿಯ ಪೂಜೆ ಮಾಡಿದರೆ ಹೊಟ್ಟೆ ತುಂಬುವುದಿಲ್ಲ.

## ವಾಕ್ಯ ರಚಿಸುವ

- ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.
  - ರೈತರು <u>ಶ್ರಮಪಟ್ಟು</u> ದುಡಿಯುತ್ತಾರೆ.
  - ಕನ್ನಡಿಯು ಬಿದ್ದು <u>ಪುಡಿಪುಡಿಯಾಯಿತು</u>.
  - ಹಿರಿಯರ ಸೇವೆ ಮಾಡಿದರೆ ಅವರ <u>ಅನುಗ್ರಹಕ್ಕೆ ಪಾತ್ರರಾಗುತ್ತೇವೆ</u>.
  - ವಿದ್ಯಾರ್ಥಿಯ ಉತ್ತರವನ್ನು ಕೇಳಿ ಅಧ್ಯಾಪಕರು <u>ತಲೆದೂಗಿದರು</u>.
  - ಆತುರದಿಂದ ಮಾಡಿದ ಕೆಲಸದಿಂದಾಗಿ <u>ನಾಚಿ ತಲೆತಗ್ಗಿಸುವಂತಾಯಿತು</u>.

### ಬರೆಯುವ

- ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ಎಂದು ಬರೆಯಿರಿ.
    - ತಮ್ಮ ಆಶೀರ್ವಾದದಿಂದ ಇಷ್ಟೆಲ್ಲ ಪ್ರಾಪ್ತವಾಯಿತು.
    - ಪ್ರತಿದಿನವೂ ವಿಭೂತಿ ಹಚ್ಚಿ ಭಯಭಕ್ತಿಯಿಂದ ಪೂಜಿಸುತ್ತಿದ್ದೇನೆ.
    - ಭಕ್ತಿಯ ಗುರುಸೇವೆಗೆ ಬಯಸಿದ್ದಕ್ಕಿಂತ ಹೆಚ್ಚಾಗಿಯೇ ಫಲ ಸಿಕ್ಕಿದೆ.

### ಲೇಖನ ಚಿಹ್ನೆ ಸೇರಿಸಿ ಬರೆಯುವ

- ಕೆಳಗೆ ನೀಡಿರುವ ಗದ್ಯಭಾಗಕ್ಕೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ.

  ನಾಳೆ ನನ್ನ ಹುಟ್ಟುಹಬ್ಬ ಬರಲೇಬೇಕು ಊಟಕ್ಕೆ ಪಾಯಸ ಹೋಳಿಗೆ ಎಲ್ಲ ಇರುತ್ತದೆ ಊಟದ ಹೆಸರು ಹೇಳಿದ್ದೇ ತಡ ರವಿಗೆ ಬಾಯಲ್ಲಿ ನೀರೂರಿತು ಗೆಳೆಯ ನನಗೆ ಬರಬೇಕೆಂಬ ಆಸೆ ಇದೆ ಆದರೆ ಏನು ಮಾಡೋಣ ನನ್ನೊಂದಿಗೆ ನನ್ನ ತಂಗಿಯೂ ಬರಬಹುದೇ ಎಂದು ಕೇಳಿದನು

### ಶೀರ್ಷಿಕೆ ಬರೆಯುವ

- 'ಮೂಢಭಕ್ತಿ' ಕಥೆಯನ್ನು ಓದಿದಿರಲ್ಲವೇ? ಈ ಕಥೆಗೆ ಯೋಗ್ಯವಾದ ಬೇರೆ ಎರಡು ಶೀರ್ಷಿಕೆಗಳನ್ನು ಬರೆಯಿರಿ. ಅದಕ್ಕೆ ಕಾರಣವನ್ನು ಬರೆಯಿರಿ.

### ಸಂಭಾಷಣೆ ಬರೆಯುವ

- ಈ ಕಥೆಯಲ್ಲಿ ನಿಮಗೆ ಇಷ್ಟವಾದ ಭಾಗವನ್ನು ಸಂಭಾಷಣೆಯಾಗಿ ಬರೆದು ಅಭಿನಯಿಸಿರಿ.

# ಮಂಗಳ ಗ್ರಹದಲ್ಲಿ ಪುಟ್ಟಿ

ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ? ಇದು ಕಷ್ಟ

ಒಂದಿನ ಇದ್ದಕ್ಕಿದ್ದಂತೆ
ಪುಟ್ಟಿಗೆ ರೆಕ್ಕೆಯು ಬಂದಿತ್ತು
ಹಕ್ಕಿಯ ಹಾಗೆ ಹಾರುವ ಮನಕೆ
ಹೆಚ್ಚಿನ ಹರುಷವ ತಂದಿತ್ತು



ಕೂಡಲೆ ಪುಟ್ಟಿ ಥಣ್ಣನೆ ಜಿಗಿದು
ಆಗಸದೊಡಲಿಗೆ ಹಾರಿದಳು
ಹಾರುತ ತೇಲುತ ಮುಂದಕೆ ಸಾಗಿ
ಚಂದ್ರನ ಮಡಿಲನು ಸೇರಿದಳು

ಚಂದ್ರನ ಮೇಲೆ ನೆಟ್ಟಗೆ ನಿಂತು
ಭೂಮಿಯ ಕಡೆಗೆ ನೋಡಿದರೆ
ನೇರಳೆ ಬಣ್ಣದ ಚೆಂಡಿನ ಹಾಗೆ
ಕಂಡಿತು ಅವಳಿಗೆ ನಮ್ಮ ಧರೆ

ಚಂದ್ರನ ಬಿಟ್ಟು ಮೇಲಕೆ ಹಾರಿ
ಸೇರಲು ಮಂಗಳನಂಗಳವ
ಕೆಂಪಗೆ ಬಣಬಣಗುಟ್ಟುತಲಿತ್ತು
ಕಾಣಲಿಲ್ಲ ಯಾವುದೆ ಜೀವ

ಪುಟ್ಟಿಯು ಕಂಡಳು ಮಂಗಳನಲ್ಲಿ
'ಯೋಗಿ' ಹೆಸರಿನ ಹೆಬ್ಬಂಡೆ
ಒಡನೆ ಕೇಳಿದಳು ಕೆಂಪು ಬಂಡೆಯನು
'ನೀನು ಹೇಗೆ ಇಲ್ಲಿಗೆ ಬಂದೆ?'

ಬಂಡೆಯು ಕಣ್ಣೀರನು ಸುರಿಸುತ್ತಾ
ಹೇಳಿತು ಪುಟ್ಟಿಗೆ ನೋವಿನಲಿ
'ಪುಟ್ಟಿಯೇ, ನಮ್ಮೀ ಮಂಗಳ ಗ್ರಹದ
ದುರಂತ ಕಥೆಯನು ಕೇಳಿ ತಿಳಿ'
ಹಿಂದೊಂದು ಕಾಲದಿ ಈ ಗ್ರಹದಲ್ಲಿ
ಇತ್ತು ಜೀವಜಲ ಹಸಿರು ಮರ
ಆಗಿನ ಜನತೆಯು ನಾಡನು ಕಟ್ಟಲು
ಮರಗಳ ಕಡಿಯೆ ಬಂತು ಬರ
ಮಳೆ ಬೆಳೆ ಕಾಣದೆ ಜೀವಿಯು ಅಳಿದು
ಬಂದಿತು ನಮಗೆ ಇಂಥ ಸ್ಥಿತಿ
'ನಿಮ್ಮ ಭೂಮಿಯಲಿ ಗಿಡಮರ ಅಳಿದರೆ
ಮುಂದೆ ಒಂದು ದಿನ ಇದೇ ಗತಿ'
ಬಣ ಬಣಗುಟ್ಟುವ ಬಯಲನು ಕಂಡು
ಢವಢವಗುಟ್ಟಿತು ಎಳೆ ಹೃದಯ
ಹಸಿರನು ಅಳಿಸದೆ ಗಿಡಮರ ಬೆಳೆಸಿ
ಉಳಿಸುವೆವೆಂದಳು ಈ ಧರೆಯ
ಭೂಮಿಗೆ ಬಂದು ಜನತೆಯ ಕಂಡು
ಹಸಿರನು ಉಳಿಸಲು ಬೇಡಿದಳು
ತಾನು ಕೂಡ ಎಳೆಸಸಿಗಳ ನೆಟ್ಟು
ಬೆಳೆಸುತ ಕುಣಿಕುಣಿದಾಡಿದಳು



*ಸಿ.ಎಂ. ಗೋವಿಂದ ರೆಡ್ಡಿ*

## ಚಟುವಟಿಕೆಗಳು

### ಹಾಡುವ

- ಈ ಪದ್ಯವನ್ನು ರಾಗವಾಗಿ ಹಾಡಿರಿ.

## ಉತ್ತರಿಸುವ

- ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ರೆಕ್ಕೆ ಬಂದಾಗ ಪುಟ್ಟಿ ಏನು ಮಾಡಿದಳು?
2. ಪುಟ್ಟಿಗೆ ಭೂಮಿ ಹೇಗೆ ಕಂಡಿತು?
3. ಮಂಗಳ ಗ್ರಹದ ದುರಂತ ಕಥೆ ಯಾವುದು?
4. ಎಳೆ ಹೃದಯ ಢವಢವಗುಟ್ಟಿದೇಕೆ?
5. ಪುಟ್ಟಿ ಭೂಮಿಯನ್ನು ಹೇಗೆ ಉಳಿಸುವೆನೆಂದಳು?

## ಪ್ರಾಸಪದ ಬರೆಯುವ

- ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಪಟ್ಟಿ ಮಾಡಿರಿ.

## ಸಾಲು ಹುಡುಕುವ

- ಕೆಳಗೆ ಕೊಟ್ಟಿರುವ ಪದಗಳ ಅರ್ಥವನ್ನು ಸೂಚಿಸುವ ಪದವಿರುವ ಸಾಲುಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.

ಅಡಿಗೆರೆ ಎಳೆದ ಪದಗಳಿಗೆ ಸಮಾನಾರ್ಥದ ಪದಗಳಿರುವ ಸಾಲುಗಳನ್ನು ಪದ್ಯದಿಂದ ಆಯ್ದು ಬರೆಯಿರಿ.

- ಆಕಾಶದ ಒಳಗೆ ಹಾರಿದಳು.
- ಕಂಡಿತು ಅವಳಿಗೆ ನಮ್ಮ ಭೂಮಿ
- ಯೋಗಿ ಕೆಸರಿನ ದೊಡ್ಡಬಂಡೆ
- ದುಃಖದ ಕಥೆಯನ್ನು ಕೇಳಿ ತಿಳಿ.
- ಇತ್ತು ನೀರು ಹಸಿರು ಮರ

## ಊಹಿಸಿ ಹೇಳುವ

- ಹಕ್ಕಿಗಳು ಹಾರುವುದನ್ನು ನೀವು ನೋಡಿದ್ದೀರಲ್ಲವೇ? ನಿಮಗೂ ರೆಕ್ಕೆ ಬಂದರೆ ಏನು ಮಾಡುವಿರಿ? ಊಹಿಸಿ ಹೇಳಿರಿ.

### ಗದ್ಯರೂಪದಲ್ಲಿ ಬರೆಯುವ

- ಕೆಳಗೆ ಕೊಡಲಾದ ಪದ್ಯದ ಸಾಲುಗಳನ್ನು ಗದ್ಯರೂಪದಲ್ಲಿ ಬರೆಯಿರಿ.
    - ಬಣಬಣಗುಟ್ಟುವ ಬಯಲನು ಕಂಡು
      ಢವಢವಗುಟ್ಟಿತು ಎಳೆ ಹೃದಯ
    - ಮಳೆ ಬೆಳೆ ಕಾಣದೆ ಜೀವಿಯು ಅಳಿದು
      ಬಂದಿತು ನಮಗೆ ಇಂಥ ಸ್ಥಿತಿ
    - ನೇರಳೆ ಬಣ್ಣದ ಚೆಂಡಿನ ಹಾಗೆ
      ಕಂಡಿತು ಅವಳಿಗೆ ನಮ್ಮ ಧರೆ
    - ಒಡನೆ ಕೇಳಿದಳು ಕೆಂಪು ಬಂಡೆಯನು
      ನೀನು ಹೇಗೆ ಇಲ್ಲಿಗೆ ಬಂದೆ?

### ಪದ ಹುಡುಕುವ

- ಈ ಪದ್ಯದಲ್ಲಿ ಬರುವ ಒತ್ತಕ್ಷರದ ಪದಗಳನ್ನು ಹುಡುಕಿ ಬರೆಯಿರಿ.

  ಉದಾ: ಪುಟ್ಟಿಗೆ, ಇಷ್ಟ, ರೆಕ್ಕೆ, ಕಷ್ಟ

### ಗಟ್ಟಿಯಾಗಿ ಓದುವ

- ಒತ್ತಕ್ಷರದ ಪದವಿರುವ ಸಾಲುಗಳನ್ನು ಗಟ್ಟಿಯಾಗಿ ಓದಿರಿ.

### ಘೋಷಣವಾಕ್ಯ ಬರೆಯುವ

- ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಘೋಷಣ ವಾಕ್ಯಗಳನ್ನು ಬರೆಯಿರಿ.

| ಹಸಿರು ಬೆಳೆಸಿ<br>ಜೀವ ಉಳಿಸಿ | ಕಾಡೇ ನಾಡಿನ ಸಂಪತ್ತು |
|---|---|

## ಸಾಲು ಮುಂದುವರಿಸುವ

- ಪದ್ಯದ ಸಾಲುಗಳನ್ನು ಓದಿ ಮುಂದುವರಿಸಿ ಬರೆಯಿರಿ.

  ಅಂಗಳದಲ್ಲಿ ಆಡುವುದೆಂದರೆ

  ಪುಟಾಣಿ ಕಿಟ್ಟಿಗೆ ಬಲು ಇಷ್ಟ

  ..................................

  ..................................

  ..................................

  ..................................

## ಸಾರಾಂಶ ಬರೆಯುವ

- ಈ ಪದ್ಯವನ್ನು ಓದಿ ತಿಳಿದಿರಲ್ಲವೇ? ಪದ್ಯದ ಸಾರಾಂಶವನ್ನು ಬರೆಯಿರಿ.

## ಊಹಿಸಿ ಟಿಪ್ಪಣಿ ಬರೆಯುವ

- “ಭೂಮಿಯ ಗಿಡಮರ ಅಳಿದರೆ ಏನಾದೀತು?” ಚರ್ಚಿಸಿ ಟಿಪ್ಪಣಿ ಬರೆಯಿರಿ.

## ಸಂಗ್ರಹಿಸಿ ಬರೆಯುವ

- ಬಣಬಣಗುಟ್ಟು, ಢವಢವಗುಟ್ಟು, ಎಂಬ ಪದಗಳು ಪದ್ಯದಲ್ಲಿ ಬಂದಿವೆ. ಅದೇ ರೀತಿಯ ಇತರ ಪದಗಳನ್ನು ಸಂಗ್ರಹಿಸಿ ಬರೆಯಿರಿ.

## ಪೂರ್ತಿಗೊಳಿಸುವ

- ಪದ್ಯವನ್ನು ಓದಿ ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ಪೂರ್ತಿಗೊಳಿಸಿರಿ.
  - ಬಂಡೆಯು ...............................ಸುರಿಸುತ್ತಾ ಹೇಳಿತು.
  - ಹಸಿರನ್ನು ಅಳಿಸದೆ ............................ಬೆಳೆಸಿ ಉಳಿಸುವೆನೆಂದಳು.
  - ತಾನು ಕೂಡ ಎಳೆ .............................. ನೆಟ್ಟು ಬೆಳೆಸುತ ಕುಣಿದಾಡಿದಳು.
  - ನೇರಳೆ ಬಣ್ಣದ ...................................... ಹಾಗೆ ಕಂಡಿತು.
  - ಪುಟ್ಟಿಯು ಕಂಡಳು ಮಂಗಳನಲ್ಲಿ ................................. ಹೆಸರಿನ ಹೆಬ್ಬಂಡೆ.

## ವಾಕ್ಯವನ್ನು ರಚಿಸಿರಿ

- ಕೆಳಗಿನ ಪದಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಿರಿ. ಆ ಪದಗಳನ್ನುಪಯೋಗಿಸಿ ವಾಕ್ಯಗಳನ್ನು ರಚಿಸಿರಿ.

  ಮಾದರಿ : ದನ – ದಾನ

  - ದನ ಹಾಲು ಕೊಡುತ್ತದೆ.
  - ರಮೇಶನು ಬಡವರಿಗೆ ದಾನ ಮಾಡಿದನು.

  ಹಗೆ –

  ದರ –

  ಜಲ –


  ಪದ –

## ಒಗಟು ಬಿಡಿಸುವ

- ಕೆಳಗೆ ನೀಡಲಾದ ಒಗಟುಗಳಿಗೆ ಉತ್ತರ ಬರೆಯಿರಿ.

1. ಬಾಯಿಯಿಲ್ಲದ ಬಳ್ಳಿ, ಬಾರಿಬಾರಿಗೂ ಕರೆಯುತ್ತೆ, ಸುಖ ದುಃಖವನ್ನೆಲ್ಲಾ ತಿಳಿಸುತ್ತೆ.
2. ಕುಂತಲ್ಲೇ ಸುತ್ತುತ್ತೇನೆ, ಲೋಕವನ್ನೇ ಎಚ್ಚರಿಸುತ್ತೇನೆ.
3. ಕೈಯಲ್ಲಿನ ಕರಡಿಗೆ ಒತ್ತಿದರೆ ಮಿನುಗುತ್ತಿದೆ.
4. ನಾಲ್ಕು ಕಾಲುಗಳುಂಟು ಪ್ರಾಣಿಯಲ್ಲ, ಬೆನ್ನು ತೋಳುಗಳುಂಟು ಮನುಷ್ಯನಲ್ಲ. ನಾನಿಲ್ಲದಿದ್ದರೆ ನೀನು ನಿಂತೇ ಇರಬೇಕಲ್ಲ.
5. ಕೆಲಸ ಮಾಡುವಾಗ ಟೊಪ್ಪಿ ತೆಗೆದು ಕಾಲಿಗೆ ಹಾಕುತ್ತೇನೆ.
6. ಅಣ್ಣನ ಮನೆ ದೀಪದಿಂದ ತಮ್ಮನ ಮನೆಯಲ್ಲಿ ಬೆಳಕು.
7. ದಾಸ್ ಬುರುಡೆ, ದೌಲತ್ ಬುರುಡೆ, ಲೋಕಕ್ಕೆಲ್ಲಾ ಎರಡೇ ಬುರುಡೆ.
8. ಮಗ ಬೆಳಗ್ತಾನೆ, ತಂದೆ ಅಳ್ತಾನೆ, ತಾಯಿ ಅರಚುತ್ತಾಳೆ.

# ವಾಲ್ಟ್ ಡಿಸ್ನಿ



ಷಿಕಾಗೊ ನಗರದ ಒಂದು ಹೂದೋಟದಲ್ಲಿ ಓರ್ವ ಬಾಲಕ ಕೆಲಸ ಮಾಡುತ್ತಿದ್ದ. ಅವನು ಹತ್ತಿರದ ಗ್ಯಾರೇಜ್‌ನಲ್ಲಿ ವಾಸವಾಗಿದ್ದನು. ಚಿತ್ರ ಬರೆಯುವುದು ಅವನ ಏಕೈಕ ಹವ್ಯಾಸವಾಗಿತ್ತು. ಆ ಹಳೆಯ ಗ್ಯಾರೇಜ್‌ನಲ್ಲಿ ವಾಸಿಸುತ್ತಿದ್ದಾಗ ಅವನಿಗೆ ಅಲ್ಲಿಯೇ ಇದ್ದ ಒಂದು ಇಲಿಯ ಸ್ನೇಹ ಲಭಿಸಿತು. ಇವನು ಚಿತ್ರ ಬಿಡಿಸುವ ಹಾಳೆಯ ಹತ್ತಿರ ಕುಳಿತು ಇಲಿ ತನ್ನ ಮೀಸೆ ತೀಡಿಕೊಳ್ಳುತ್ತಿತ್ತು. ಈ ದೃಶ್ಯ ಬಾಲಕನ ಮನಸ್ಸಿನಲ್ಲಿ ಅಚ್ಚೊತ್ತಿತ್ತು. ಮುಂದಿನದು ಅಕ್ಷರಶ: ಇತಿಹಾಸ. ಆ ಹುಡುಗ ವ್ಯಂಗ್ಯಚಿತ್ರಗಳ ಲೋಕಪ್ರಸಿದ್ಧ ನಿರ್ಮಾಪಕನಾದ. ಅನಿಮೇಶನ್ ಚಿತ್ರ ತಯಾರಿಯ ಪರ್ಯಾಯ ಹೆಸರಾದ. ಆತನ ಚಲನಚಿತ್ರಗಳ ಮುಖ್ಯ ಪಾತ್ರವೂ ಇಲಿಯಾಯಿತು. ಆ ಬಾಲಕ ಯಾರೆಂದು ತಿಳಿಯಿತೇ? ಅವನೇ ವಾಲ್ಟ್ ಡಿಸ್ನಿ.

ವಾಲ್ಟ್ ಡಿಸ್ನಿ 1905 ರ ಡಿಸೆಂಬರ್ 5 ರಂದು ಷಿಕಾಗೋದಲ್ಲಿ ಜನಿಸಿದನು. ಬಡತನ ಅವನಿಗೆ ಬಳುವಳಿಯಾಗಿ ಬಂದಿತ್ತು. ಅವನಿಗೆ ಚಿತ್ರ ಬಿಡಿಸುವುದರಲ್ಲಿ ಅಪರಿಮಿತ ಆಸಕ್ತಿ. ಜೀವನಕ್ಕಾಗಿ ಶ್ರಮದ ದುಡಿಮೆ. ಅವನು ತನ್ನ 17ನೇ ವಯಸ್ಸಿನಲ್ಲಿ ವಾಹನ ಚಾಲಕನಾಗಿ ಕೆಲಸ ಆರಂಭಿಸಿದನು. ಮೊದಲ ವಿಶ್ವ ಮಹಾಯುದ್ಧದ ಕಾಲದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ವಾಹನ ಚಾಲಕನಾಗಿ ದುಡಿದನು. ಆದರೆ ಯುದ್ಧ ಮುಗಿದಾಗ ಚಿಕ್ಕ ವಯಸ್ಸೆಂದು ಸೇನೆಗೆ ಸೇರಿಸಿಕೊಳ್ಳಲಿಲ್ಲ. ಇದು ಡಿಸ್ನಿಗೆ ವರದಾನವಾಯಿತು. ಅವನು ಚಿತ್ರಕಲೆ ಬೋಧಿಸುವ ರಾತ್ರಿಶಾಲೆಗೆ ಸೇರಿಕೊಂಡ. ಸ್ಲೈಡುಗಳನ್ನು ತಯಾರಿಸುವ ಜಾಹೀರಾತು ಸಂಸ್ಥೆಗೆ ನೆರವಾದ. ಡಿಸ್ನಿಗೆ ವ್ಯಂಗ್ಯಚಿತ್ರ ತೆಗೆಯುವ ಆಸೆ. ಸ್ನೇಹಿತನ ಜತೆಗೂಡಿ ಆರಂಭಿಸಿದ ಕಂಪೆನಿ ದಿವಾಳಿಯಾಯಿತು. ಆದರೆ ಒಂದು ವ್ಯಂಗ್ಯ ಚಲನ ಚಿತ್ರ ತಯಾರಿಸಲು ಸಾವಿರಾರು ಸ್ಥಿರ ಅಣಕು ಚಿತ್ರಗಳನ್ನು ರಚಿಸಬೇಕಾಗುತ್ತಿತ್ತು. ಇದರಿಂದಾಗಿ ಡಿಸ್ನಿಗೆ ಲಾಭವೇ ಆಯಿತು. ಅವನು ಚಿತ್ರಗಳಲ್ಲಿ ಪಳಗಿದ ಮಾತ್ರವಲ್ಲ, ಮುಂದೆ ಸರಣಿ ವ್ಯಂಗ್ಯ ಚಿತ್ರಗಳನ್ನು ನಿರ್ಮಿಸುವ ಎದೆಗಾರಿಕೆ ಬಂತು.

ಮಿಕ್ಕಿ ಮೌಸ್ ಜನಮಾನಸದಲ್ಲಿ ಸ್ಥಿರವಾಗಿ ನೆಲೆಸಿದ ಹೆಸರು ಮತ್ತು ಪಾತ್ರ. ಸುಮಾರು 130 ಕ್ಕೂ ಮಿಕ್ಕಿದ ಚಲನಚಿತ್ರಗಳು ಮತ್ತು ಸರಣಿ ವ್ಯಂಗ್ಯಚಿತ್ರಗಳಲ್ಲಿ ಮಿಕ್ಕಿ ಮೌಸ್ ಮುಖ್ಯ ಪಾತ್ರಧಾರಿಯಾಗಿ ಪ್ರೇಕ್ಷಕರ ಮನಸೂರೆಗೊಂಡಿತು. ಕೆಂಪು ನಿಕ್ಕರ್, ದೊಡ್ಡಗಾತ್ರದ ಹಳದಿ, ಬೂದು ಹಾಗೂ ಬಿಳಿಯ

ಕೈಚೀಲಗಳನ್ನು ಧರಿಸಿದ ಮಿಕ್ಕಿ ಪೂರಕವಾಗಿ ಹಿನ್ನೆಲೆಯಲ್ಲಿ ವಾಲ್ಟ್‌ನ ಧ್ವನಿ ಹೊಸ ಲೋಕವನ್ನೇ ಸೃಷ್ಟಿಸಿತು. ಮಿಕ್ಕಿ ಮಾತ್ರವಲ್ಲ, ಅದರ ಬಳಗವೇ ವ್ಯಂಗ್ಯ ಚಲನಚಿತ್ರಗಳಲ್ಲಿ ಕಾಣಿಸಿಕೊಂಡಿದೆ. ಮಿಕ್ಕಿಯ ಗೆಳತಿ ಮಿನ್ನಿ, ನಾಯಿ ಪ್ಲುಟೋ, ಸ್ನೇಹಿತ ಡೊನಾಲ್ಟ್ ಡಕ್ (ಬಾತುಕೋಳಿ), ಸೂಫಿ ಹೀಗೆ ಹಲವು. ಗಿಡಮರಗಳು, ಹಾವುಗಳು ಕೂಡಾ ಅವನ ಚಿತ್ರದಲ್ಲಿ ಪಾತ್ರಗಳೇ. ಡಿಸ್ನಿಯ ರಮ್ಯ ಪ್ರಪಂಚದಲ್ಲಿ ಜೀರುಂಡೆ ಹೂವಿನ ತುತ್ತೂರಿ ಊದಬಲ್ಲುದು. ಗಿಡದ ಎಲೆ ಬಾಲಕಿಯಂತೆ ಕುಣಿಯಬಲ್ಲುದು.



ವಾಲ್ಟ್ ಡಿಸ್ನಿ ತಾಳ್ಮೆ ಹಾಗೂ ಕಷ್ಟಸಹಿಷ್ಣುತೆಗೆ ಇನ್ನೊಂದು ಹೆಸರು. ಅವನು 'ಸ್ನೋ ವೈಟ್' ಸರಣಿ ಚಿತ್ರಕ್ಕಾಗಿ 20 ಲಕ್ಷ ವ್ಯಂಗ್ಯ ಚಿತ್ರಗಳನ್ನು ಬರೆಸಿದನು. 640 ಚಿತ್ರಕಲಾವಿದರು ಇದಕ್ಕಾಗಿ ದುಡಿದರು. ಅವನು 1930 ರಿಂದ 1966ರ ವರೆಗೆ ಲಕ್ಷಾಂತರ ಚಿತ್ರಗಳನ್ನು ಬರೆದು, ಬರೆಸಿ ಕಾರ್ಟೂನ್ ಚಿತ್ರಗಳ ಹರಿಕಾರನೆನಿಸಿದನು. ಪ್ರಕೃತಿಯ ಸಮಸ್ತ ಸಂಪತ್ತನ್ನು (ಇಲಿ, ಬೆಕ್ಕು, ನಾಯಿ ಇತ್ಯಾದಿ) ಚಿತ್ರಿಸಿ ಮಕ್ಕಳ ಮನಸ್ಸನ್ನು ಅರಳುವಂತೆ ಮಾಡಿದ್ದು ಅವನ ಸಾಧನೆಯೇ ಸರಿ. ದಣಿದ ಮನಸ್ಸಿಗೆ ಮುದ ನೀಡುವ, ಬೇಸರ ಕಳೆಯುವ ವಾಲ್ಟ್ ಡಿಸ್ನಿಯ ಚಿತ್ರಗಳು ಡಿಸ್ನಿಲ್ಯಾಂಡ್ ನಿರ್ಮಾಣದ ಮೂಲಕ ಸಾಕಾರಗೊಂಡಿತು. 1955ರಲ್ಲಿ ಆತ ಲಾಸ್ ಏಂಜಲೀಸ್‌ನಲ್ಲಿ ನಿರ್ಮಿಸಿದ ಅದ್ಭುತ ಪ್ರಪಂಚವೇ ಡಿಸ್ನಿಲ್ಯಾಂಡ್. ಸುಮಾರು 160 ಎಕರೆಗಳಲ್ಲಿ ಈ ಕಿನ್ನರ ಲೋಕ ಸೃಷ್ಟಿಯಾಗಿದೆ. ಓಡುವ ರೈಲು, ಬಾಹ್ಯಾಕಾಶ ನೌಕೆ, ಚಿತ್ರ ತಯಾರಿಸುವ ಸ್ಟುಡಿಯೋ ಎಲ್ಲವನ್ನು ಇಲ್ಲಿ ನಿರ್ಮಿಸಲಾಗಿದೆ. ಜಗತ್ತಿನ ಎಲ್ಲೆಡೆ ಸಂಚರಿಸಿ ಮನರಂಜನ ತಾಣಗಳನ್ನು ನೋಡಿದ ಡಿಸ್ನಿ ತನ್ನ ಕನಸಿನ ಡಿಸ್ನಿಲ್ಯಾಂಡ್ ನಿರ್ಮಿಸಿಯೇ ಬಿಟ್ಟ. ಜಗತ್ತಿನಾದ್ಯಂತ ಮಕ್ಕಳು ಹಿರಿಯರೆನ್ನದೆ ಎಲ್ಲರೂ ಅವನ ಸರಣಿ ಚಿತ್ರಗಳನ್ನು ನೋಡಿ ಆನಂದಿಸುತ್ತಾರೆ. 1966ರ ಡಿಸೆಂಬರ್ 15 ರಂದು ವಾಲ್ಟ್ ಡಿಸ್ನಿ ನಿಧನ ಹೊಂದಿದನು. ಆದರೆ ದಿನಂಪ್ರತಿ ಟಿ.ವಿ. ವಾಹಿನಿಗಳಲ್ಲಿ ಕಾರ್ಟೂನ್ ಚಿತ್ರಗಳನ್ನು ಕಾಣುವಾಗ ಅದರ ಹಿಂದಿನ ಪ್ರೇರಕ ಶಕ್ತಿ, ಶುದ್ಧ ಮನರಂಜನೆಯ ಸಾಕಾರಮೂರ್ತಿ ಡಿಸ್ನಿಯ ನೆನಪಾಗುತ್ತದೆ.

## ಚಟುವಟಿಕೆಗಳು

### ಚರ್ಚಿಸುವ

- ಕಾರ್ಟೂನ್ ಚಿತ್ರಗಳನ್ನು ನಿರಂತರವಾಗಿ ನೋಡುವುದು ಸರಿಯೇ ತಪ್ಪೇ? ಚರ್ಚಿಸಿರಿ.

### ಉತ್ತರಿಸುವ

- ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ವಾಲ್ಟ್ ಡಿಸ್ನಿಯ ಮುಖ್ಯ ಪಾತ್ರ ಯಾವುದು?
2. ಡಿಸ್ನಿಯನ್ನು ಯಾಕೆ ಸೈನ್ಯಕ್ಕೆ ಸೇರಿಸಿಕೊಳ್ಳಲಿಲ್ಲ?
3. ಡಿಸ್ನಿ ಗ್ಯಾರೇಜಿನಲ್ಲಿ ಚಿತ್ರ ಬರೆಯುವಾಗ ಇಲಿ ಏನು ಮಾಡುತ್ತಿತ್ತು?
4. ಡಿಸ್ನಿಲ್ಯಾಂಡ್ ಎಲ್ಲಿದೆ?
5. ಡಿಸ್ನಿಯ ಚಲನಚಿತ್ರಗಳ ಪಾತ್ರಧಾರಿಗಳು ಯಾರು?

### ಚಿತ್ರ ಬಿಡಿಸುವ

- ನೀವು ಕಾರ್ಟೂನ್ ಚಿತ್ರಗಳನ್ನು ನೋಡಿರುವಿರಲ್ಲವೇ? ನೀವೂ ಒಂದು ಕಾರ್ಟೂನ್ ಚಿತ್ರ ಬಿಡಿಸಿರಿ.

### ಚಿತ್ರ ನೋಡುವ, ಕಥೆ ಹೇಳುವ

- ವಾಲ್ಟ್ ಡಿಸ್ನಿಯ ಕಾರ್ಟೂನ್ ಚಿತ್ರವನ್ನು ನೋಡಿರಿ. ಅದರ ಕಥೆಯನ್ನು ತರಗತಿಯಲ್ಲಿ ಹೇಳಿರಿ.

### ಜಾಹಿರಾತು ಸಂಗ್ರಹಿಸುವ

- ದಿನಪತ್ರಿಕೆಗಳಿಂದ ನಿಮಗೆ ಇಷ್ಟವಾದ ಜಾಹೀರಾತುಗಳನ್ನು ಸಂಗ್ರಹಿಸಿರಿ. ಅವುಗಳನ್ನು ವರ್ಗೀಕರಿಸಿ ಸಂಚಿಕೆ ತಯಾರಿಸಿರಿ.

### ಭಿತ್ತಿಪತ್ರ ತಯಾರಿಸುವ

- ನಿಮ್ಮ ಶಾಲೆಯಲ್ಲಿ ವಾಲ್ಟ್ ಡಿಸ್ನಿಯ ಚಲನಚಿತ್ರ ಪ್ರದರ್ಶನ ಇದೆಯೆಂದು ಭಾವಿಸಿರಿ. ಅದರ ಪ್ರಚಾರಕ್ಕೆ ಒಂದು ಭಿತ್ತಿಪತ್ರವನ್ನು ತಯಾರಿಸಿರಿ.

### ಸಂದರ್ಶನ ನಡೆಸುವ

- ಸೂಕ್ತವಾದ ಪ್ರಶ್ನಾವಳಿ ರಚಿಸಿ ನಿಮ್ಮ ಊರಿನ ಚಿತ್ರ ಕಲಾವಿದರ ಸಂದರ್ಶನ ನಡೆಸಿರಿ.

### ಊಹಿಸಿ ಬರೆಯುವ

- ಮಿಕ್ಕಿಮೌಸ್ ಏನು ಹೇಳಿರಬಹುದು? ಊಹಿಸಿ ಬರೆಯಿರಿ.



### ವ್ಯಂಗ್ಯಚಿತ್ರ ಸಂಗ್ರಹಿಸುವ

- ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿರುವ ವ್ಯಂಗ್ಯಚಿತ್ರಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

# ಅರ್ಥಕೋಶ

ಅದ್ಭುತ – ಅತಿಶಯ
ಅಚ್ಚೊತ್ತು – ಅಚ್ಚೆರೆ
ಅಣಕು – ವಿನೋದ
ಅಪರಿಮಿತ – ಮಿತಿಯಿಲ್ಲದ
ಅರಳು – ಸಂತೋಷಗೊಳ್ಳು, ಹಿಗ್ಗು
ಅಳಿ – ನಾಶವಾಗು
ಅಕ್ಷಯ – ಬರಿದಾಗದುದು, ಖಾಲಿಯಾಗದ್ದು
ಅಕ್ಷರಶಃ – ಪ್ರತಿಯೊಂದು ವಿವರದಲ್ಲೂ ಒಂದೊಂದು ಅಕ್ಷರವನ್ನೂ ಪರಿಗಣಿಸಿದ
ಆಗಸ – ಆಕಾಶ, ಬಾನು
ಇತಿಹಾಸ – ಚರಿತ್ರೆ
ಎದೆಗಾರಿಕೆ – ಧೈರ್ಯ
ಒಡಲು – ಹೊಟ್ಟೆ, ಶರೀರ
ಗ್ಯಾರೇಜು – ವಾಹನಗಳನ್ನು ದುರಸ್ಥಿ ಮಾಡುವ ಸ್ಥಳ
ಗೋವು – ದನ,ಹಸು
ಜಾಹೀರಾತು – ಪ್ರಕಟಣೆ
ಢವಗುಟ್ಟು – ಎದೆಬಡಿತ ಹೆಚ್ಚಾಗು
ತಾಣ – ನೆಲೆ, ಬೀಡು
ತೀರ್ಥಯಾತ್ರೆ – ಪವಿತ್ರ ಸ್ಥಳಗಳ ದರ್ಶನಕ್ಕಾಗಿ ಮಾಡುವ ಯಾತ್ರೆ
ದಣಿವು – ಆಯಾಸ, ಬಳಲಿಕೆ
ದಿವಾಳಿಯಾಗು – ಎಲ್ಲವನ್ನು ಕಳೆದುಕೊಳ್ಳು
ದುರಂತ – ದುಃಖಪೂರ್ಣವಾದ ಮುಕ್ತಾಯ
ಧರೆ – ಭೂಮಿ
ಪವಾಡ – ಆಶ್ಚರ್ಯಕರವಾದ ಘಟನೆ
ಪುಟಾಣಿ – ಚಿಕ್ಕವ, ಎಳೆಯ
ಪ್ರೇರಕ – ಪ್ರಚೋದಕ
ಪ್ರೇಕ್ಷಕ – ನೋಡುವವನು
ಬಣಗುಟ್ಟು – ಬರಿದಾಗಿ ಕಾಣು
ಬರ – ಕ್ಷಾಮ
ಬಿತ್ತು – ಬೀಜ ಹಾಕು
ಬಳುವಳಿ – ಉಂಬಳಿ
ಬೀಗಮುದ್ರೆ – ಬೀಗಕ್ಕೆ ಹಾಕಿರುವ ಮೊಹರು
ಬೋಧಿಸು – ಹೇಳಿಕೊಡು
ಭಕ್ತಿ – ಗುರುಹಿರಿಯರಲ್ಲಿ ತೋರುವ ನಿಷ್ಠೆ
ಮನರಂಜನೆ – ಮನಸ್ಸನ್ನು ಸಂತೋಷಗೊಳಿಸುವಿಕೆ, ವಿನೋದ
ಮುದ – ಹಿಗ್ಗು, ಸಂತೋಷ
ಮೂಢ – ತಿಳಿಗೇಡಿ, ಮೂರ್ಖ
ವರದಾನ – ಅನುಗ್ರಹ
ವಿಭೂತಿ – ಬೂದಿ, ಭಸ್ಮ
ವಿಸ್ಮಯ – ಆಶ್ಚರ್ಯ, ಅಚ್ಚರಿ
ವ್ಯಂಗ್ಯ – ಕೊಂಕು, ಅಣಕ
ಶಿಷ್ಯ – ವಿದ್ಯಾರ್ಥಿ, ಅಭ್ಯಾಸಿ
ಶೋಭಿಸು – ಅಂದವಾಗು, ಚೆಲುವಾಗು, ಪ್ರಕಾಶಿಸು
ಶ್ರಮ – ಪ್ರಯತ್ನ
ಸತ್ಕರಿಸು – ಉಪಚರಿಸು, ಆದರಿಸು
ಸಮೀಪಿಸು – ಹತ್ತಿರ ಬರು
ಸರಣಿ – ಕ್ರಮ
ಸಾಧನೆ – ಪರಿಶ್ರಮ,ಅಭ್ಯಾಸ
ಸಾಹಸ – ಶಕ್ತಿಮೀರಿ ಮಾಡುವ ಕೆಲಸ, ಶೌರ್ಯ
ಸೂರೆಗೊಳ್ಳು – ಸೆಳೆ, ಆಕರ್ಷಿಸು
ಸಂಪತ್ತು – ಸಿರಿ, ಐಶ್ವರ್ಯ
ಸ್ಥಿರ – ಶಾಶ್ವತವಾದ
ಹರಿಕಾರ – ಮುಂದಾಳು, ಸಂದೇಶವಾಹಕ
ಹರುಷ – ಸಂತೋಷ
ಹವ್ಯಾಸ – ಅಭ್ಯಾಸ
ಹಿನ್ನೆಲೆ – ತಳಹದಿ
ಹೆಬ್ಬಂಡೆ – ದೊಡ್ಡ ಬಂಡೆ
ಹೊನ್ನು – ಚಿನ್ನ

## ಕಲಿಕಾ ಸಾಧನೆಗಳು

- ಹೊಸ ಪ್ರಯೋಗಗಳು, ಪದಗಳು, ಗಾದೆಗಳು, ನುಡಿಗಟ್ಟುಗಳು ಮೊದಲಾದುವುಗಳನ್ನು ಉಪಯೋಗಿಸಿಕೊಂಡು ಸಂದರ್ಭಾನುಸಾರ ಮಾತನಾಡುವುದು.
- ಕಥೆ, ಕವಿತೆ, ವಿವರಣೆ, ವರ್ಣನೆ, ಮೊದಲಾದವುಗಳನ್ನು ಆಲಿಸಿ ಮತ್ತು ಓದಿ ತನ್ನದೇ ಆದ ರೀತಿಯಲ್ಲಿ ಹೇಳುವುದು ಮತ್ತು ಬರೆಯುವುದು.
- ಕವಿತೆಯನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳನ್ನು ಪರಿಗಣಿಸಿ ಹಾಡುವುದು.
- ಕವಿತೆಯ ಆಶಯವನ್ನು ಅರಿತು ಆಸ್ವಾದಿಸುವುದು ಮತ್ತು ಆಸ್ವಾದನಾ ಟಿಪ್ಪಣಿಯನ್ನು ಬರೆಯುವುದು.
- ವಿಶೇಷಣಗಳು, ವಿಶೇಷ ಪ್ರಯೋಗಗಳು ಮೊದಲಾದುವುಗಳನ್ನು ಸೂಕ್ತವಾಗಿ ಸೇರಿಸಿ ವಾಕ್ಯವನ್ನು ಬರೆಯುವುದು.
- ಪತ್ರಿಕಾ ವರದಿ ಮತ್ತು ವಾರ್ತೆಗಳನ್ನು ವಿಶ್ಲೇಷಿಸಿ(ಯಾರು, ಯಾರಿಗೆ, ಎಲ್ಲಿ, ಏನು, ಹೇಗೆ, ಯಾಕೆ, ICT ಸಾಧ್ಯತೆ) ಪತ್ರ, ಭಿತ್ತಿಪತ್ರ, ಕರಪತ್ರ ಮೊದಲಾದವುಗಳನ್ನು ರಚಿಸುವುದು.
- ಕಥೆ, ಕವಿತೆ, ವಿವರಣೆ, ಭಿತ್ತಿಪತ್ರಿಕೆ ಮೊದಲಾದ ಸೃಜನಾತ್ಮಕ ರಚನೆಗಳಲ್ಲಿ ತೊಡಗುವುದು ಮತ್ತು ಅವುಗಳನ್ನು ಸಂಗ್ರಹಿಸಿ ಸಂಚಿಕೆ, ಹಸ್ತಪತ್ರಿಕೆ, ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಕಥೆ ಮತ್ತು ಕವಿತೆಗಳ ಸಾಲುಗಳ ಅರ್ಥವನ್ನು ತಿಳಿದುಕೊಂಡು ಅಲ್ಲಿನ ಸೌಂದರ್ಯವನ್ನು ಆಸ್ವಾದಿಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಓದಿ ಆಸ್ವಾದಿಸಿದ ಕಥೆ, ಕವಿತೆ ಮೊದಲಾದುವುಗಳನ್ನು ಪಾತ್ರಾಭಿನಯ, ಮೂಕಾಭಿನಯ ಸಂಭಾಷಣೆಗಳ ಮೂಲಕ ಮಂಡಿಸುವುದು.
- ಕೃತಿ ರಚನೆಯಲ್ಲಿ ಇತರರು ಬಳಸಿದ ಆಶಯ, ಪ್ರಯೋಗ, ನುಡಿಗಟ್ಟು ಮೊದಲಾದುವುಗಳನ್ನು ಹೋಲಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಬರವಣಿಗೆಯಲ್ಲಿ ಬಳಕೆಯಾಗುವ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ತನ್ನ ರಚನೆಯಲ್ಲಿ ಬಳಸುವುದು.
- ಪಾಠಭಾಗದಲ್ಲಿ ಬಳಕೆಯಾದ ಪದಗಳನ್ನು ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವುದು.
- ಓದಿದ, ಆಲಿಸಿದ ವ್ಯವಹಾರದ ರೂಪದ ಆಶಯವನ್ನು ತಿಳಿದುಕೊಂಡು ಇನ್ನೊಂದು ವ್ಯವಹಾರ ರೂಪವಾಗಿ ಬದಲಾಯಿಸುವುದು.
- ಮಾಹಿತಿ ತಂತ್ರಜ್ಞಾನವನ್ನು (ICT) ಉಪಯೋಗಿಸಿ, ಕೇಳಿಯೂ ನೋಡಿಯೂ ಆಶಯವನ್ನು ತಿಳಿದುಕೊಂಡು ಸ್ವಂತ ರಚನೆ ಮಾಡುವುದು ಮತ್ತು ಮಂಡಿಸುವುದು.